## 78

# ನೀನು ಇರಬಾರದಂಥ ಸ್ಥಳದಲ್ಲಿ, ನೀನಿರುವದನ್ನು ನೀನು ಅರಿಯುವಾಗ

## (28:1-11)

ಪೌಲನ ರೋಮಾಯದ ಪ್ರವಾಸವನ್ನು ನಾವು ನಮ್ಮ ಜೀವಿತದ ಸಮುದ್ರ ಪ್ರಯಾಣಕ್ಕೆ ಹೋಲಿಕೆ ಮಾಡಿದ್ದೆವು. ಇನ್ನೊಂದು ಹೋಲಿಕೆ ಏನೆಂದರೆ, ನಾವು ಇರಬೇಕಾದ ಸ್ಥಳದಲ್ಲಿ ನಾವು ಇರದೆ ಇರುವದನ್ನು ಗಮನಿಸುತ್ತೇವೆ.

ಪೌಲನ ರೋಮಾ ಪ್ರಯಾಣದ ಚಿತ್ರಣವನ್ನು ಕ್ಷಣಕಾಲ ನೋಡಿರಿ.[1] ಕೈಸರೈಯಿಂದ ರೋಮಾ ಪ್ರಯಾಣದ ಒಂದು ರೇಖೆಯನ್ನು ಮಾನಸಿಕವಾಗಿ ಕಲ್ಪಿಸಿಕೊಳ್ಳಿರಿ (ಪ್ರಯಾಣ ಆರಂಭಗೊಂಡು ಅಂತ್ಯಗೊಂಡ ಸ್ಥಳಗಳು). ಕಾರ್ಯರೂಪದಲ್ಲಿ ಪೌಲನು ಹಡಗಿನಲ್ಲಿ ಪ್ರಯಾಣ ಮಾಡಿದ ಮಾರ್ಗಕ್ಕೆ ಅದನ್ನು ಹೋಲಿಸಿರಿ: ಉತ್ತರಕ್ಕೆ, ಕರಾವಳಿಗೆ, ಪಶ್ಚಿಮಕ್ಕೆ ಈಗಿರುವ ಟರ್ಕಿ ದೇಶದ ಬಳಿಗೆ; ದಕ್ಷಿಣದ ಕ್ರೇತ ಪ್ರದೇಶಕ್ಕೆ ನಂತರ ಪಶ್ಚಿಮದ ಚಂದರೇವುಗಳಿಗೆ ಅಂತಿಮವಾಗಿ, ದಕ್ಷಿಣ ಮತ್ತು ಉತ್ತರಗಳಿಗೆ (ಅವೆರಡೂ ಒಟ್ಟಾಗಿರುವ) ಹಡಗು ಹೊಯ್ದಾಡುತ್ತಾ ಮೆಲೀತೆಯ ದಿಬ್ಬದಲ್ಲಿ ಸಿಕ್ಕಿಕೊಂಡಿತು (ಅಪೊಸ್ತಲರ ಕೃತ್ಯಗಳು 27:27; ASV) ತಡವಾಗಿಯೂ, ಕಷ್ಟದಲ್ಲಿಯೂ ನಾವಿಕರು ಪುನಃ ಉತ್ತರದಿಂದ ರೋಮಾಯಕ್ಕೆ ಪ್ರಯಾಣ ಬೆಳೆಸಿದರು.

ಈ ವಿಧವಾದ ಜೀವಿತವನ್ನು ನಮ್ಮಲ್ಲಿ ಅನೇಕರು ಹೊಂದಿರುವೆವು. ಕೆಲವರ ಜೀವಿತ ನೇರ ಪ್ರಯಾಣವಾಗಿದ್ದರೆ ಜೀವಿತದ ಉದ್ದೇಶಗಳನ್ನು ಆರಂಭಿಸಿ, ನೇಮಕವಾದ ಗುರಿಯೆಡೆಗೆ ಸಾಗುತ್ತೇವೆ. ಇತರರ ಜೀವಿತವು ಆಕಸ್ಮಿಕವಾದ ತಿರುವುಗಳನ್ನು ಹೊಂದಿರುತ್ತದೆ. ನನ್ನ ಸ್ನೇಹಿತೆಯು ತನ್ನ ಜೊತೆಗಾರನನ್ನು ಕಳಕೊಂಡಿರುವಳು, ಅವಳು ಅವನನ್ನು ಅವಲಂಭಿಸಿದ್ದರಿಂದ, ಈಗ ಆಕೆಗೆ ಎಲ್ಲವೂ ಕಷ್ಟಕರವಾಗಿದೆ. ಇನ್ನೊಬ್ಬ ಸ್ನೇಹಿತನು ನನಗೆ ಒಂದು ಪತ್ರವನ್ನು ಬರೆದು "ನಾನು ಮನೆಗೆ ಬಂದು ನನ್ನ ಮುದ್ದಾದ ಮೊಮ್ಮಕ್ಕಳನ್ನು ತೂಗಲು ಇಚ್ಚಿಸಿರುವೆನು - ಆದರೆ ಇದೋ ಇಲ್ಲಿ ನಾನು ಕೆಲಸ ಮಾಡಿ ನನ್ನ ಜೀವನವನ್ನು ಸಾಗಿಸ ಬೇಕಾಗಿದೆ!" ನೀವು ಇಷ್ಟಪಡದ ಸ್ಥಳದಲ್ಲಿ ನೀವಿರುವದನ್ನು ನೀವು ಗ್ರಹಿಸುವಾಗ, ಅದರ ಬಗ್ಗೆ ನೀವು ಏನು ಮಾಡಬೇಕು? ಏನು ಮಾಡಬಹುದು?

ಪೌಲನು ಮೆಲೀತೆಯಲ್ಲಿ ಇರುವಾಗ, ಅದು ಅವನು ಇರಬೇಕಾದ ಸ್ಥಳವಾಗಿರಲಿಲ್ಲ. ಆದರೆ ಅವನು ರೋಮಾಯದಲ್ಲಿರಬೇಕಿತ್ತು (19:21). ಅವನು ಯೆರೂಸಲೇಮಿನಲ್ಲಿ ಬಂದಿತನಾಗಿ ನಂತರ, ಅವನು ರೋಮಾಪುರದಲ್ಲಿ ಸಾಕ್ಷಿಯಾಗಬೇಕೆಂದು ಕರ್ತನು ತಿಳಿಸಿದ್ದನು (23:11). ಆಗ ಅಪೊಸ್ತಲನು ಕೈಸರನ ಬಳಿ ಪ್ರತಿವಾದ ಮಾಡುವೆನು ಎಂದು ಹೇಳಿ, ರೋಮಾಯದ ಒಳಗೆ ಹೊರಟಿದ್ದನು. ಪ್ರಯಾಣದ ಸಮಯದಲ್ಲಿ, ಅವನು ಕೈಸರನ ಮುಂದೆ ನಿಲ್ಲುವನು ಎಂದು ದೇವರು ವಾಗ್ದಾನ ಮಾಡಿದ್ದನು (27:24). ಪೌಲನು ಆ ಪ್ರಧಾನ ಪಟ್ಟಣದಲ್ಲಿ ವಾಸಿಸುವ ಹಕ್ಕುದಾರನಾಗಿದ್ದನು. ಆದರೆ, ಅವನು ಈಗ ಒಂದು ಚಿಕ್ಕ ದ್ವೀಪದಲ್ಲಿ ಸಿಕ್ಕಿಕೊಂಡಿದ್ದನು, ಅದು ರೋಮಾಯದಿಂದ ಬಹಳ ಮೈಲುಗಳ ಅಂತರದಲ್ಲಿತ್ತು. ಚಳಿಗಾಲವು ಹತ್ತಿರವಾಗಿ, ವಸಂತಕಾಲದ ತನಕ ಅಲ್ಲೇ ಇರುವ ಸಾಧ್ಯತೆಗಳಿದ್ದವು.

ಪೌಲನು ತಾನು ಇರಬಾರದ ಸ್ಥಳದಲ್ಲಿ, ತಾನು ಇರುವದನ್ನು ಕಂಡುಕೊಂಡಾಗ, ಏನು ಮಾಡಿದನು? ನಮ್ಮಲ್ಲಿ ಕೆಲವರು ವರ್ತಿಸುವ ಹಾಗೆ ಮಾಡಿದನೇ: ಅಥವಾ ದೂರನ್ನು ಹೇಳಿ ಗುಣಗುಟ್ಟಿದ್ದನೇ? ಅವನು ಸ್ವಾರ್ಥಿಯಾಗಿ, ಕಹಿ ಮನೋಭಾವವನ್ನು ಹೊಂದಿದನೇ? ಅವನು ಬೇಸರಗೊಂಡವನಾಗಿ, ಅವನ ಸುತ್ತಲೂ ಇದ್ದವರನ್ನು ಬೇಸರ ಪಡಿಸಿದನೇ? ಈ ಪರಿಸ್ಥಿತಿಯಲ್ಲಿ ಪೌಲನು ಹೇಗೆ ವರ್ತಿಸಿದನೆಂದು ತಿಳಿಯೋಣ.

ಈ ಪಾಠವನ್ನು ಕಾರ್ಯರೂಪಕ್ಕೆ ತರುವಂತೆ, *ನನಗೆ* ಸಲಹೆಗಳನ್ನು[2] ನೀಡುವ ಜ್ಞಾನಿಯಾದ ಹಾಗೆಯೇ ಭಯಭಕ್ತಿವುಳ್ಳ ಒಬ್ಬ ಅಜ್ಜಿಯನ್ನು ನಾನು ಹೊಂದಿರುವೆನು. ಅ ಅಜ್ಜಿಯಾದ ರೋಪರ್‌ಳನ್ನು ನಿಮಗೆ ಪರಿಚಯಿಸುವೆನು:[3] ಆಕೆಯು ನಿಮ್ಮ ಅಜ್ಜಿಯ ಹಾಗೆ ಇರುವರು ಆಕೆಯ ಕೆನ್ನೆಗಳು ಸುಕ್ಕುಗಟ್ಟಿವೆ, ಆದರೆ ಆಕೆಯ ಕಣ್ಣುಗಳು ಹೊಳೆಯುತ್ತಿವೆ, ಆಕೆಗೆ ಅಘಾತಗಳ ಅನುಭವವಾಗಿದ್ದರೂ, ಧೃತಿಗೆಟ್ಟಿರುವದಿಲ್ಲ. ಆಕೆ ಕರ್ತನನ್ನು ಹಾಗೂ ನನ್ನನ್ನು ಪ್ರೀತಿಸುವಳು ಆಕೆ ನನ್ನ ಬಗ್ಗೆ ಚಿಂತಿಸುವಾಗ, ಆಕೆಯ ಹೊಳೆಯುವ ಕಣ್ಣುಗಳು ನನ್ನ ಆತ್ಮವನ್ನೇ ದೃಷ್ಟಿಸುತ್ತವೆ. ನಾನು ಚಿಕ್ಕವನಾಗಿರುವಾಗ ಆಕೆಯ ಹೇಳುತ್ತಿದ್ದ ಬುದ್ಧಿಮಾತುಗಳನ್ನು ಇಷ್ಟಪಡುತ್ತಿರಲಿಲ್ಲ, ಆದರೆ ಆಕೆಯ ಮಾತನ್ನು ಗೌರವಿಸಬೇಕೆಂದು ಸಮಯವು ನನಗೆ ಬೋಧಿಸಿದೆ. ನಮ್ಮ ಕಡೇಯ ಪಾಠವು ಅಂತ್ಯಗೊಂಡ ಅಂಶದಿಂದ, ನಮ್ಮ ಮುಂದಿನ ಚರ್ಚೆಯು ಆರಂಭಗೊಳ್ಳುತ್ತದೆ.

## "ಕೆಟ್ಟದಾದ ಪರಿಸ್ಥಿತಿ"[4] (28:1)

*ಪೌಲನು ಆಯಾಸಗೊಂಡವನಾಗಿ ಸಮುದ್ರ ತೀರದಲ್ಲಿ ಮಲಗಿರುವನು, ಅವನು ನಿಟ್ಟುಸಿರುಬಿಡುತ್ತಾ, ಇನ್ನೂ ದಡ ಸೇರುತ್ತಿರುವ ಬದುಕುಳಿದವರನ್ನು ಗಮನಿಸುತ್ತಿರುವನು. ಒಟ್ಟು 276 ಜನರು ತೊಯ್ದವರಾಗಿ, ಹಸಿವೆಯಿಂದಲೂ ಮತ್ತು ನಡುಗುತ್ತಲೂ, ಸಾಗರದಿಂದ ಎಸೆಯಲ್ಪಟ್ಟ ವ್ಯರ್ಥ ಪದಾರ್ಥದಂತೆ ಒಟ್ಟಾಗಿ ಸೇರಿರುವರು. ಬೋರ್ಗರೆಯುತ್ತಿದ್ದ ಸಮುದ್ರವು, ಅವರ ಹಡಗನ್ನು ಭಾಗ ಭಾಗವಾಗಿ ವಿಂಗಡಿಸಿ ನಾಶಮಾಡುವದನ್ನು ನೋಡುತ್ತಿರುವರು.*[5]

ಅವರ ಆಲೋಚನೆಗಳು ಏನಾಗಿರಬಹುದು? ಹಡಗು ಮತ್ತು ಅದರಲ್ಲಿದ್ದ ಸರಕುಗಳು ನಾಶವಾದ್ದರಿಂದ, ಹಡಗಿನ ಯಜಮಾನನು ಕಣ್ಣೀರು ಸುರಿಸುತ್ತಿದ್ದನು, ಆದರೆ ಪೌಲ ಮತ್ತು ಇತರರು ಬದುಕುಳಿದಿದ್ದಾಕ್ಕಾಗಿ ಕೃತಜ್ಞರಾಗಿದ್ದರು!

ಲೂಕನು ದಾಖಲಿಸಿ, "ನಾವು ದಡಕ್ಕೆ ಸೇರಿದ ಮೇಲೆ ಆ ದ್ವೀಪದ[6] ಹೆಸರು ಮೆಲೀತೆ ಎಂದು ನಮಗೆ ತಿಳಿದು ಬಂತು"[7] (ವಚನ 1). ಮೆಲೀತೆ ದ್ವೀಪವು ಹದಿನೆಂಟು ಮೈಲು ಉದ್ದ ಹಾಗೂ ಹದಿನೆಂಟು ಮೈಲು ಅಗಲವಾಗಿ, ಒಂದು ಒರಟಾದ ಸ್ಥಳವಾಗಿತ್ತು, ಅದು ಸಿಸಿಲಿಯಿಂದ ದಕ್ಷಿಣಕ್ಕೆ 58 ಮೈಲುಗಳ ಅಂತರದಲ್ಲಿತ್ತು, ಹಾಗೂ ಮೆಡಿಟೇರೇನಿಯನ್ ಸಮುದ್ರದ ಇತಾಲ್ಯದ ಹಾಗೂ ಉತ್ತರ ಆಫ್ರಿಕದ ನಡುವೆ ಇತ್ತು. ಫೊಯಿನಿಕೆಯ ವರ್ತಕರು ಅಲ್ಲಿ ನೆಲೆಸಿದ್ದರು. ಆದರೆ ಕ್ರಿ.ಪೂ. 218ರಲ್ಲಿ ಅದು ರೋಮಾಯರ ಆಡಳಿತಕ್ಕೆ ಒಳಪಟ್ಟಿತ್ತು. ಕಾನಾನ್ಸ್ ಚಾಫ್‌ಯಲ್ಲಿ ಮೆಲೀತೆ ಅಂದರೆ "ಆಶ್ರಯ"; ಆ ನಡುಗಡ್ಡೆಯಲ್ಲಿ ಆಶ್ರಯಕ್ಕಾಗಿ ಬಂದ ಫೂಯಿನೀಕೆಯ ನಾವಿಕರು ಈ ಹೆಸರನ್ನು ನೀಡಿರಬಹುದು.[8] ಈಗ ಆ ದ್ವೀಪವು ಪೌಲನಿಗೂ ಅವನ ಸಂಗಡಿಗರಿಗೂ ಆಶ್ರಯದಾಣವಾಯಿತು.

*ನಾನು ಈ ಚಿತ್ರಣವನ್ನು ನೋಡುವಾಗ, ರೋಪರ್ ಅಜ್ಜಿಯು ನನ್ನ ಸಮೀಪ ನಿಂತಿರುವದನ್ನು ನೆನಪು ಮಾಡಿಕೊಂಡೆನು, ಅವಳು ಚಳಿಯಿಂದ ತಪ್ಪಿಸಿಕೊಳ್ಳಲು ಒಂದು ದುಪ್ಪಟವನ್ನು ಹಾಕಿಕೊಂಡಿದ್ದಳು. "ಡೇವಿಡ್ ಚಳಿಯಿಂದ ನಡುಗುತ್ತಿರುವ ಆ ನಿರಾಶ್ರಿತರನ್ನು ನೋಡು" ಹಾಗೂ ಇದನ್ನು ನೆನಪಿನಲ್ಲಿಡು: "ಅನೇಕ ಸಂಗತಿಗಳು ಜರುಗಿದ್ದರೂ, ಆ ಪರಿಸ್ಥಿತಿಯು ಇನ್ನೂ ಕೆಟ್ಟದಾಗುವ ಸಾಧ್ಯತೆಯಿದೆ. ಪೌಲ ಮತ್ತು ಸಂಗಡಿಗರು ಒದ್ದೆಯಾಗಿ, ನಡುಗುತ್ತಾ, ಆಯಾಸಗೊಂಡಿರುವರು - ಆದರೆ ಅವರಿಗೆ ಸಾವು ನಿಶ್ಚಿತ!" ನಾನು*

*ಅಧೈರ್ಯಗೊಳ್ಳುವೆನೆಂದು ತಿಳಿದು ಆಕೆಯು ಆ ಮಾತನ್ನು ನನಗೆ ಹೇಳಿದಳು.*

ನಾವುಗಳು ಇರಬಾರದ ಸ್ಥಳದಲ್ಲಿ ಇರುವೆವೆಂದು ಅರಿಯವಾಗ, ನಮ್ಮ ಮನೋಭಾವನೆಗಳನ್ನು ತಿದ್ದಿಕೊಳ್ಳುಬೇಕು. "ನೀನು ಯಾವಾಗಲು ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ, ಆದರೆ ನಿನ್ನ ಮನೋಭಾವವನ್ನು ಆಯ್ಕೆಮಾಡಿಕೊಳ್ಳಬಹುದು."[9]

## "ಪ್ರಕಾಶಮಾನವಾದ ಬದಿಯನ್ನು ನೋಡು" (28:2)

*ಮಳೆಗೆ ತುತ್ತಾದ ಮೆಲೀತೆ ದ್ವೀಪವನ್ನು ನೋಡುವಾಗ, ಅಲ್ಲಿ ಹಡಗಿನ ಅಪಘಾತಕ್ಕೆ ತುತ್ತಾದವರು ಮಾತ್ರ ಅಲ್ಲಿರಲಿಲ್ಲ. ಆ ದ್ವೀಪದಲ್ಲಿದ್ದ ಕೆಲವರು ಹಡಗಿನ ಅಪಘಾತವನ್ನು ಗಮನಿಸಿ, ಈ ವರದಿಯನ್ನು ಎಲ್ಲರಿಗೂ ತಿಳಿಸಿದ್ದರು. ಈಜುತ್ತಾ ದಡ ಸೇರುತ್ತಿದ್ದವರನ್ನು ಆಹ್ವಾನಿಸಲು, ಒಂದು ಆಹ್ವಾನ ಮಂಡಳಿಯ ಅಲ್ಲಿ ಸೇರಿಬಂದಿತ್ತು.*

"ಅನ್ಯ ಭಾಷೆಯವರಾದ ಆ ದ್ವೀಪದವರು ನಮಗೆ ಮಾಡಿದ ಉಪಕಾರ[10] ಅಷ್ಟಿಷ್ಟಲ್ಲ.[11] ಮಳೆಯು ಆಗಲೇ ಬೀಳುತ್ತಿರುವದರಿಂದಲೂ ಚಳಿಯಾಗಿರುವದರಿಂದಲೂ ಅವರು ಬೆಂಕಿಯನ್ನು ಹೊತ್ತಿಸಿ ನಮ್ಮೆಲ್ಲರನ್ನು ಸೇರಿಸಿಕೊಂಡರು" (ವಚನ 2) ಅದು ಅಕ್ಟೋಬರ್ ಕಡೆಯ ಹಾಗೂ ನವಂಬರ್ ಮೊದಲ ದಿವಸಗಳಾಗಿದ್ದವು. ಚಳಿಯ 50°F ಇರಬಹುದು (10°ಸಿ). ಒದ್ದೆಯಾಗಿ, ಆಯಾಸಗೊಂಡ ಹಾಗು ಮಳೆಯಲ್ಲಿ ಒದ್ದೆಯಾದವರಿಗೆ, ಮೆಡಿಟೇರಿ ಯನ್‌ನಲ್ಲಿ ಹೆಚ್ಚು ಚಳಿಯಾಗುತ್ತಿತ್ತು. "ಅವರು ಈಗಾಗಲೇ ಬಿರುಗಾಳಿಯಿಂದ ತತ್ತರಿಸಿದವರಾಗಿ[12] ಎರಡು ವಾರಗಳ ಕಾಲ ಇದ್ದವರಿಗೆ, ಈ ಬೆಂಕಿಯು ವಿಶೇಷವಾದ ಹಿತವನ್ನು ನೀಡಿತ್ತು - ದೈಹೀಕವಾದ ಹಾಗೂ ಮಾನಸಿಕವಾದ ಹಿತವನ್ನು ನೀಡಿತ್ತು!"[13]

ಸ್ಥಳೀಯ ಜನರ ಆಧರಣೆಯು "ಅಪರಿಮಿತವಾಗಿತ್ತು." ದ್ವೀಪಗಳಲ್ಲಿದ್ದ ಕೆಲವು ಕಡಲ್ಗಳ್ಳರು ಹಡಗುಗಳ ಅಪಘಾತಕ್ಕಾಗಿ ಯಾವಾಗಲು ಕಾಯುತ್ತಿದ್ದರು ಮತ್ತು ನಿರಪರಾದಿ ಗಳನ್ನು ಕೊಂದುಹಾಕುವ ಸಾಧ್ಯತೆಗಳು ಇದ್ದವು ಇದು ಸಾಮಾನ್ಯವಾದ ಕಾರ್ಯವಾಗಿತ್ತು. ಕೆಲವು ಸಾರಿ ಅವರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದರು; ಕೆಲವು ಸಮಯ ಅವರಲ್ಲಿರುವದನ್ನು ಕದ್ದುಕೊಂಡು ಹಡಗಿನಲ್ಲಿರುವದೆಲ್ಲವನ್ನು ದೋಚುತ್ತಿದ್ದರು. ಮೆಲೀತೆಯ ಜನರು ತೋರಿದ ಆಧರಣೆಯ ಇವರಿಗೆ ಆಶ್ಚರ್ಯವುಂಟುಮಾಡಿತು!

"ಸ್ಥಳೀಯ ಜನಗಳು" ಕುರಿತು ಒಂದು ಮಾತನ್ನು ಹೇಳಲೇಬೇಕು. KJVಯಲ್ಲಿ "ಅನ್ಯ ಭಾಷಿಗರು" ಎಂದಿರುವದರಿಂದ (ವಚನ 4; ಇದನ್ನು ನೋಡಿರಿ ವಚನ 2), ಈ ವಿಧವಾದ ಆಹ್ವಾನ ನೀಡಿದವರು ಅನಾಗರಿಕರಾಗಿದ್ದರೂ, ಸ್ನೇಹಮಯಿಗಳಾಗಿದ್ದರೆಂದು ನಾನು ಭಾವಿಸುತ್ತೇನೆ. KJV ಒಳ್ಳೆಯ ಅನುವಾದವನ್ನು ಮಾಡಿದೆ - ಯಾಕಂದರೆ ಗ್ರೀಕ್ ಹೇಳಿಕೆಯಲ್ಲಿ "ಬಾರ್ ಬರೈನ್ಸ್" ಎಂಬುದಾಗಿದೆ. ಆದರೆ ಈ ದಿನಗಳಲ್ಲಿ "ಅನ್ಯಭಾಷಿಗರು" ಎಂಬುದು ತಪ್ಪಾದ ಅಭಿಪ್ರಾಯವನ್ನು ನೀಡುತ್ತದೆ. ಅನಾಗರಿಕ ಭಾಷೆಯನ್ನು ಆಡುತ್ತಿದ್ದ ಜನರಿಗೆ ಗ್ರೀಕ್‌ನವರು (ಬಾರ್ - ಬಾರ್) ಎಂದು ಕರೆಯುತ್ತಿದ್ದರು, ಅದು ಗ್ರೀಕ್‌ನ ಸುಂದರ ವಾದ ಭಾಷೆಯಾಗಿರಲಿಲ್ಲ. ಈ ದಿನದಂತೆ, "ಅನ್ಯ ಭಾಷಿಗರು, ಆ ಸಂಸ್ಕೃತರು, ಒರಟಾದವರು ಎಂಬುದು ಆ ದಿನಗಳಲ್ಲಿ ಅನಾಗರಿಕವಾಗಿರಲಿಲ್ಲ; ಒಬ್ಬನು ಪ್ರಾದೇಶಿಕ ಭಾಷೆಯನ್ನಾಡುವವನು ಎಂಬ ಅಭಿಪ್ರಾಯ ಮಾತ್ರವಾಗಿತ್ತು."[14] ರೋಮಯದ ಸಿಸಿಲಿಯ ಒಂದು ಭಾಗವಾದ ಮೆಲೀತೆಯು ಉತ್ತಮ ನಾಗರೀಕತೆ ಯನ್ನು ಹೊಂದಿತ್ತು. "ಪೌಲನ ದಿವಸಗಳಲ್ಲಿ ಈ ನಡುಗಡ್ಡೆಯು ಸಮುದ್ರವಾದ ಹಾಗೂ ನವೀನ ಕಟ್ಟಡಗಳನ್ನು ಹೊಂದಿದ್ದ ಪ್ರದೇಶವಾಗಿತ್ತು."[15] ಪೌಲ ಮತ್ತು ಅವನ ಸಂಗಡಿಗರಿಗೆ ಅತಿಥಿ ಸತ್ಕಾರ ನೀಡಿದ ಜನರನ್ನು NIVಯ ಬಹು ಉತ್ತಮರು ಎಂದು ತಿಳಿಸಿದೆ.

*ನಾನು ಈಗ ಸ್ನೇಹಮಯಿಗಳಾದ ಮತ್ತು ಅನುಕಂಪ ತೋರಿದ ದ್ವೀಪದವರ ಜೊತೆ ಸೇರಿ ನಿಂತಿರುವೆನು, ದೊಡ್ಡದಾದ ಬೆಂಕಿಯ ಜ್ವಾಲೆಗಳು ಆಕಾಶದ ಕಡೆಗೆ ಚಾಚಿದ್ದವು, ಒಟ್ಟು*

*ಮುನ್ನೂರು ಜನರನ್ನು ಒಂದೇ ಸಮಯದಲ್ಲಿ ಬೆಚ್ಚಗಿಡುವ ಬೆಂಕಿಯು ಅದಾಗಿತ್ತು. ಏನೇಕ ದಿವಸಗಳಿಂದ ಆ ಹಡಗಿನವರು ಬೆಂಕಿ ಕಾಯಿಸಿಕೊಂಡಿರಲಿಲ್ಲ.*

*ನನ್ನ ಅಜ್ಜಿಯಾದ ರೋಪರ್ ನನ್ನ ಪಕ್ಕೆಗೆ ತಿವಿದು, ನಾನು ಆಕೆಯನ್ನು ಗಮನಿಸಿದಾಗ, "ನಾನು ನನ್ನ ಕೊನೆಯ ಸಲಹೆಯನ್ನು ನೀಡುವೆನು. ಸಮಸ್ಯೆಗಳು ಸಹಜವಾಗಿ ಸತ್ಯವಾಗಿದ್ದರೂ, ಅದು ಇನ್ನೂ ಕೆಟ್ಟ ಪರಿಸ್ಥಿತಿಗೆ ಹೋಗುವ ಸಾಧ್ಯತೆಯಿದೆ," ನೀವು ಅದನ್ನು ಸೂಕ್ಷ್ಮವಾಗಿ ಇಣುಕಿ ನೋಡಿದರೆ, ಅದರಲ್ಲಿ ಕೆಲವು ಉತ್ತಮ ಅಂಶಗಳನ್ನು ಕಂಡುಕೊಳ್ಳಬಹುದು. "ಆಕೆಯು ತನ್ನ ಕೈಗಳನ್ನು ಬೆಂಕಿಯ ಕಡೆಗೆ ಚಾಚಿ, ಮುಗುಳ್ನಗುತ್ತಾ, ಈ ಬೆಂಕಿಯು ನಮಗೆ ಹಿತವನ್ನು ಮಾಡುತ್ತಿದೆಯಲ್ಲವೇ" ಅಂದಳು.*

*ಆಕೆಯು ನನ್ನನ್ನು ಪುನಃ ಸ್ಪರ್ಶಿಸಿದಳು. ನಾನು ಪ್ರಕಾಶಮಾನವಾದ ಬದಿಯನ್ನು ಗಮನಿಸದೆ, ಕತ್ತಲ ಭಾಗವನ್ನೇ ಗಮನಿಸುತ್ತಿದ್ದೆನು. ನನ್ನ ಜೀವಿತಕ್ಕೆ ಸವಾಲುಗಳು ಎದುರಾಗುವಾಗ, ನಾನು ಅವುಗಳನ್ನು ಸಮಸ್ಯೆಯೆಂದು ತಿಳಿಯುತ್ತೇನೆ ವಿನಃ, ಅದನ್ನು ಅವಕಾಶವೆಂದು ಪರಿಗಣಿಸುವದಿಲ್ಲ. (ಒಂದು ಸಾರಿ ನನ್ನ ಸಹವರ್ತಿಯು "ಡೇವಿಡ್ ಸಕರಾತ್ಮಕವಾಗಿ ಯೋಚಿಸು ಎಂದು ಹೇಳಿದನು! ನಾನು ಪ್ರತಿಕ್ರಿಯಿಸಿ, ಈ ಸಂಗತಿಯು ನಾಶನವೇ ಎಂಬುದಾಗಿ ಸಕಾರಾತ್ಮಕವಾಗಿ ಯೋಚಿಸುವೆನು ಅಂದೆನು!")*

## "ಪರಿಸ್ಥಿತಿಯನ್ನು ಉತ್ತಮ ಅವಕಾಶವನ್ನಾಗಿ ಮಾಡಿಕೊಳ್ಳಿರಿ" (28:3)

*ನಾನು ನನ್ನ ಅಜ್ಜಿಯ ಸಲಹೆಗಳ ಕುರಿತು ಯೋಚಿಸುವಾಗ, ಜನರೆಲ್ಲರು ಕಾಡಿನಿಂದ ಸೌದೆಗಳನ್ನು ತರುವದನ್ನು ನಾನು ನೋಡುತ್ತೇನೆ, ಅದನ್ನು ಅವರು ಬೆಂಕಿಯಲ್ಲಿ ಎಸೆಯುತ್ತಿದ್ದರು. ಸೌದೆಗಳನ್ನು ಹಾಕುತ್ತಲೇ ಇರಬೇಕು, ಇಲ್ಲವಾದರೆ ಅವುಗಳು ತಾವೇ ಆರಿ ಹೋಗುತ್ತವೆ.*[16] *ಅಜ್ಜಿಯು ನನ್ನ ಪಕ್ಕಲುಬನ್ನು ಪುನಃ ತಿವಿದಳು (ನನ್ನ ಪಕ್ಕೆಲುಬು ನೋವಾಗಿದೆ) ಆ ಬೆಂಕಿಯನ್ನು ಸರಿಪಡಿಸುತ್ತಿದ್ದ ಪೌಲನನ್ನು ತೋರಿಸಿದಳು!*

"ಪೌಲನು ಒಂದು ಹೊರೆ ಕಟ್ಟಿಗೆಯನ್ನು ಕೂಡಿಸಿ ಬೆಂಕಿಯ ಮೇಲೆ ಹಾಕಿದನು" (ವಚನ 3ಎ). ವಿಲಿಯಮ್ ಬಾರ್ಕ್ಲೆಯವರು, "ಪೌಲನು ಕೆಲಸಮಾಡದ ವ್ಯಕ್ತಿಯಾಗಿರಲಿಲ್ಲ; ಬೆಂಕಿಯು ಆರದಂತೆ, ಅದಕ್ಕೆ ಕಟ್ಟಿಗೆಗಳನ್ನು ಹಾಕುತ್ತಿದ್ದನು" ಎಂದು ಹೇಳಿರುವನು.[17] J. W. ಮೆಕ್ ಗಾರ್ವೆಯವರು, ನವೀನ ಮಾದರಿಯ ಪ್ರಸಂಗಿಗಳಂತೆ ಪೌಲನು ಇರಲಿಲ್ಲ, ಅವನು ಹೀನವಾದ ಕೆಲಸಕ್ಕೆ ಕೈ ಹಾಕಿದನು, ಇತರರು ಸೇವೆಯನ್ನು ಬಯಸುವಂತೆ, ಪೌಲನು ಬಯಸಲಿಲ್ಲ, "ಅವನು ತನ್ನ ಗೌರವವನ್ನು ಕಾಪಾಡಿಕೊಳ್ಳಬೇಕು ಎಂದು ಪ್ರಯತ್ನಿಸಲಿಲ್ಲ."[18] ಪೌಲನು ತನ್ನ ಜೀವಮಾನಕಾಲವೆಲ್ಲ ವೃತ್ತಿಪರನಾಗಿದ್ದನು (20:34); ಸೌದೆಯನ್ನು ತರುವದು ಅವನಿಗೆ ಕಷ್ಟಕರವಾಗಿತ್ತು, "ಕ್ರಿಸ್ತನ ಮನಸ್ಸನ್ನು ಹೊಂದಿರುವವನಿಗೆ ಯಾವುದೇ ಕೆಲಸಗಳು ಚಿಕ್ಕ ಕೆಲಸಗಳಾಗಿರುವದಿಲ್ಲ (ಫಿಲಿಪ್ಪಿ 2:1-13)."[19]

*ಅಜ್ಜಿಯು ನನ್ನ ಕಿವಿಗಳಲ್ಲಿ ಪಿಸುಗುಟ್ಟುತ್ತಾ, "ಇದರಿಂದ ನೀನು ಯಾವ ಪಾಠವನ್ನು ಕಲಿಯುತ್ತಿರುವಿ?" ಅಂದಳು. "ಕೆಲಕಾಲ ಯೋಚಿಸಿ ನಾನು ಚಿಕ್ಕ ಕೆಲಸಗಳನ್ನು ಮಾಡಲು ಹಿಂಜರಿಯಬಾರದು?" ಅಜ್ಜಿಯು ಮುಗುಳ್ನಗುತ್ತ "ಅದು ಸರಿಯಾದ ಉತ್ತರವೇ ಅಂದಳು." ಈ ಅಂಶವನ್ನು, ನೀವು ಇರಬಾರದ ಸ್ಥಳದಲ್ಲಿ ಇರುವಾಗ ನಿಮ್ಮ ಜೀವಿತಕ್ಕೆ ಅಳವಡಿಸಿ ಕೊಳ್ಳಿರಿ ಎಂದು ಮನವಿ ಮಾಡುತ್ತೇನೆ. ಪರಿಸ್ಥಿತಿಯು ತಿಳಿಯಾಗುವವರೆಗೆ ಪೌಲನು ಏನನ್ನು ಮಾಡದೆ ಸುಮ್ಮನೆಕುಳಿತ್ತಿದ್ದನೇ, ಅಥವಾ ಆ ಸನ್ನಿವೇಶದಲ್ಲಿ ಉತ್ತಮವಾದ ಇದನ್ನು ಮಾಡಿದನೇ?*

*ಉತ್ತರವು ಸಾಮಾನ್ಯವಾದ್ದದ್ದಾಗಿರುವದರಿಂದ, ಪ್ರತಿಕ್ರಿಯೆಗೆ ನಾನು ಹಿಂಜರಿಯುವದಿಲ್ಲ ಎಂದು ನನ್ನ ಜೀವಿತಕ್ಕೆ ಅನ್ವಯಿಸುತ್ತದೆ. ಕೆಲವು ಸಂದರ್ಭಗಳಲ್ಲಿ ನಾನು ಮಾಡಬೇಕಾದದ್ದನ್ನು ಮಾಡದೆ, ಸನ್ನಿವೇಶದ ಬಗ್ಗೆ ದೂರು ಹೇಳುವವನಾಗಿದ್ದೇನೆ. ನಾನು ಸರಿಯಾದ ಅಂಶವನ್ನು ಗ್ರಹಿಸಿಕೊಂಡಿರುವೆನು ಎಂದು ಅಜ್ಜಿ ತಿಳಿದಳು, ಅಜ್ಜಿಯು ನನ್ನ ಕಿವಿಯಲ್ಲಿ,*

*“ಕಾರ್ಗತ್ತಲ್ಲನ್ನು ಶಪಿಸುವದಕ್ಕಿಂತಲೂ, ಒಂದು ಮೇಣದ ಬತ್ತಿಯನ್ನು ಹಚ್ಚುವದು ಲೇಸು” ಅಂದಳು.*

## “ವಸ್ತುಗಳ ಚೂರುಗಳ ಬಳಿಗೆ ಹೋಗದಿರಿ”[20] (28:3-6)

*ಒಂದು ವಿಶೇಷವಾದ ಸಂಗತಿಗಳ ಕಡೆಗೆ ನಮ್ಮ ಗಮನವು ಹರಿಯಿತು. ನಮ್ಮ ಕಣ್ಣುಗಳು ಅಪೊಸ್ತಲನ ಮೇಲೆ ಕೇಂದ್ರೀಕೃತವಾಗಿತ್ತು. “ಒಂದು ಹಾವು ಪೌಲನ ಕೈಯನ್ನು ಬಿಗಿಯಾಗಿ ಹಿಡುಕೊಂಡಿತು”[21] (ವಚನ 3).*

ಚಳಿಯ ನಿಮಿತ್ತವಾಗಿ, ಒಂದು ಹಾವು ಪೌಲನ ಕಟ್ಟಿಗೆಯ ಹೊರೆಯಲ್ಲಿ ಸೇರಿ ಕೊಂಡಿತ್ತು.[22] ಬೆಂಕಿಯ ತಾಪಕ್ಕೆ ಆ ಹಾವು ಹೊರಗೆ ಬಂದು ಪೌಲನ ಕೈಗೆ ಸುತ್ತಿಕೊಂಡಿತ್ತು. ಅದು ತನ್ನ ಹಲ್ಲುಗಳನ್ನು ಪೌಲನ ಮಾಂಸಖಂಡಗಳಲ್ಲಿ ಚುಚ್ಚಿ, ಅವನ ಕೈಯಿಂದ ಜೋತು ಬಿದ್ದಿತ್ತು.[23]

*ಅಜ್ಜಿಯು ನನ್ನ ಕಿವಿಯಲ್ಲಿ ಪಿಸುಗುಟ್ಟಿ: ನೀವು ಇರಬಾರದ ಸ್ಥಳದಲ್ಲಿ ಇರುವಾಗ, ಕೆಲವು ಸಾರಿ, ಸಂಗತಿಗಳು ಉತ್ತಮವಾಗುವದಕ್ಕಿಂತ ಹೀನ ಸ್ಥಿತಿಗೆ ಹೋಗುವ ಸಾಧ್ಯತೆಗಳಿವೆ. ಆಕೆಯ ಮಾತನ್ನು ನಾನು ಅರ್ಥಮಾಡಿಕೊಂಡಂತೆ ನೀವು ಸಹ ಅರ್ಥಮಾಡಿಕೊಳ್ಳುವಿರಿ ಎಂದು ತಿಳಿದಿರುವೆನು.*

*ಪೌಲನ ಪರಿಸ್ಥಿತಿಯು ಇನ್ನೂ ಕೆಟ್ಟದಾಯಿತು, ನಂತರ ಬೆಂಕಿಯ ಸುತ್ತಲು ಗುಣುಗುಟ್ಟುವಿಕೆಯು ಆರಂಭವಾಯಿತು. ದ್ವೀಪವಾಸಿಗಳು ನಾಗರೀಕರಾಗಿದ್ದರೂ, ಮೂಢನಂಬಿಕೆ ಹೊಂದಿದವರಾಗಿದ್ದರು. ಸ್ಥಳೀಯರು ಪೌಲನ ಕೈಗಳಲ್ಲಿ ನೇತಾಡುತ್ತಿದ್ದ ಹಾವನ್ನು ನೋಡಿ, ಈ ಮನುಷ್ಯನು ಕೊಲೆ ಪಾತಕನೇ ಸರಿ: ಸಮುದ್ರದಿಂದ ತಪ್ಪಿಸಿಕೊಂಡು ಬಂದರೂ ನ್ಯಾಯವು ಇವನನ್ನು ಬದುಕಗೂಡಿಸುವದಿಲ್ಲವೆಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡರು[24] (ವಚನ 4).*

ಹೇಗೂ ಪೌಲನು ಖೈದಿಯಾಗಿದ್ದನು ಎಂದು ಅವರು ಅರಿತ್ತಿದ್ದರು.[25] ಆ ಹಾವು ಅವನನ್ನು ಕಚ್ಚಿದಾಗ, ಅವನು ನಿಶ್ಚಯವಾಗಿಯೂ, ಅಪರಾಧಿಯೇ, ಆದ್ದರಿಂದ ಅವನನ್ನು ಸ್ಥಳೀಯ ದೇವತೆಗಳು ತಪ್ಪಿಸಿಕೊಳ್ಳದಂತೆ ಶಿಕ್ಷೆ ನೀಡುತ್ತಿವೆ ಎಂದು ತಿಳುಕೊಂಡರು.[26]

*ಭಯಗ್ರಾಂತನಾದ ಪೌಲನನ್ನು ನಾನು ಗಮನಿಸುತ್ತೇನೆ. ನಾನು ಹಾವುಗಳನ್ನು ಇಷ್ಟಪಡುವದಿಲ್ಲ! ಒಂದು ವೇಳೆ ವಿಷಪೂರಿತ ಹಾವು ನನಗೆ ಕಚ್ಚಿದರೆ, ನನ್ನ ನರನಾಡಿಗಳಲ್ಲಿ ಪ್ರವಾಹವು ಉಂಟಾಗಬಹುದು, ಅದು ನನ್ನ ದೇಹದಲ್ಲಿ ವಿಷವನ್ನು ತುಂಬ ಬಹುದು. ಆದರೆ ಪೌಲನು ಆ ಜಂತುವನ್ನು ಬೆಂಕಿಯೊಳಗೆ ಝೋಡಿಸಿಬಿಟ್ಟನು (ವಚನ 5ಎ).*

ಯೇಸು ಎಪ್ಪತ್ತು ಜನರನ್ನು ಸುವಾರ್ತೆ ಸಾರಲು ಕಳುಹಿಸುವಾಗ, ಅವರಿಗೆ ಆತನು, “ನೋಡಿರಿ ಹಾವುಗಳನ್ನು ಚೇಳುಗಳನ್ನು ವೈರಿಯ ಸಮಸ್ತ ಬಲವನ್ನು ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ ... ಯಾವುದೂ ನಿಮಗೆ ಕೇಡುಮಾಡುವದೇ ಇಲ್ಲ” (ಲೂಕ 10:19). ಆತನು ಮಹಾ ಆ ದೇಶವನ್ನು ನೀಡಿದಾಗ, ಅಪೊಸ್ತಲರಿಗೆ ವಾಗ್ದಾನ ಮಾಡಿ: “ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು: ... ಅವರು ಹಾವುಗಳನ್ನು ಎತ್ತುವರು” (ಮಾರ್ಕ 16:17, 18ಎ).[27] ಪೌಲನು, “ಅಪೊಸ್ತಲನ ಒಂದು ಸೂಚಕ ಕಾರ್ಯವನ್ನು ಮಾತ್ರ ಮಾಡುತ್ತಿದ್ದನು” (2 ಕೊರಿಂಥ 12:12ಎ).

*ಪೌಲನಿಗೆ “ಇಲ್ಲಿಯವರೆಗೆ ಯಾವ ಕೇಡು ಉಂಟಾಗಲಿಲ್ಲ” (ವಚನ 5ಬಿ), ಆದರೆ ಆ ದ್ವೀಪದವರು ಇವನು ಬಾತು ಹೊದಾನು[28] ಇಲ್ಲವೆ ಆಕಸ್ಮಾತ್ತಾಗಿ ಸತ್ತು ಬಿದ್ದಿದ್ದನು ಎಂದು ನೋಡಿಕೊಂಡೇ ಇದ್ದರು (ವಚನ 6ಎ).[29] “ಬಹಳ ಹೊತ್ತು ನೋಡಿಕೊಂಡಿದ್ದ ಮೇಲೆ ಅವನಿಗೆ ವಿಕಾರವೇನು ಆಗಿಲ್ಲವೆಂದು ಕಂಡು ಬೇರೆ ಯೋಚನೆಯುಳ್ಳವರಾಗಿ - ಇವನು ಒಬ್ಬ ದೇವರು ಎಂದು ಹೇಳಿಕೊಂಡರು” (ವಚನ 6ಬಿ).*

ಜನರು ಒಂದು ಬದಿಯಿಂದ ಇನ್ನೊಂದು ಬದಿಗೆ ಚಲಿಸುತ್ತಿದ್ದರು! ಮೆಕ್ ಗಾರ್ವೆಯವರು ಇದನ್ನು "ಲುಸ್ತ್ರವು ಹಿಮ್ಮುಖವಾಯಿತು"[30] ಎಂದು ಕರೆದಿರುವರು. ಈ ಸಮಯದಲ್ಲಿ ಪೌಲನಿಗೆ ಯಾವ ಕೇಡು ಸಂಭವಿಸಲಿಲ್ಲ, ಮತ್ತು ಅವನು ಕೂಗಿಕೊಳ್ಳಲಿಲ್ಲ, "ನಾನೂ ಮನುಷ್ಯನು, ನಿಮ್ಮಂಥ ಸ್ವಭಾವವುಳ್ಳವನು!" ಎಂದು ಹೇಳಿರಬಹುದು (14:15 ನೋಡಿರಿ). ಲುಸ್ತ್ರದಂತೆ ನಿಶ್ಚಯವಾಗಿಯೂ ಅವನನ್ನೂ ಯಾರು ಪೂಜಿಸಲಿಲ್ಲ, ಅವನಿಗೆ ಜನರು ಇವನು ಕೊಲೆಗಾರನು ಮತ್ತು ದೇವತೆ ಎಂದು ಕರೆದಾಗಲೂ ಅವನು ವಿಚಲಿತನಾಗಲಿಲ್ಲ.

ಪೌಲನನ್ನು ರೋಮಾಯಕ್ಕೆ ಹೋಗದಂತೆ ವಿಷಪೂರಿತವಾದ ಹಾವನ್ನು ಸೈತಾನನು ಬಳಸಿರಬಹುದು; ಅದು "ಪುರಾತನ ಸರ್ಪವಾಗಿರಬಹುದು" (ಪ್ರಕಟಣೆ 12:9). ಸೈತಾನನು ಈ ಹಿಂದೆಯು ಸರ್ಪವನ್ನು ಬಳಸಿದ್ದನು (ಆದಿಕಾಂಡ 3). ಆದರೆ ದೇವರು ಈ ಸನ್ನಿವೇಶ ವನ್ನು ತನ್ನ ಉಪಯೋಗಕ್ಕಾಗಿ ಬಳಸಿಕೊಂಡನು. ಇಲ್ಲಿ ದೇವರು, "ಪೌಲನು ಪರಲೋಕದ ಗುರಿ ಹೊಂದಿದವನು ಮಾತ್ರವಲ್ಲದೆ, ಪರಲೋಕದ ಸಂರಕ್ಷಣೆಯನ್ನೂ ಪಡೆದವನೆಂದು ರುಜುವಾತು ಪಡಿಸಿದನು."[31]

*ನನ್ನ ಅಜ್ಜಿಯು ಮಾತನಾಡುವ ಮೊದಲೇ ನಾನು ಸಿದ್ಧನಾಗಿದ್ದೆನು: "ಈ ಘಟನೆಯು ದೇವರು ನಮ್ಮನ್ನು ಸಂರಕ್ಷಿಸುತ್ತಾನೆ ಎಂದು ತಿಳಿಸುತ್ತೇನೆ." ಅಕೆ ಮುಗುಳ್ನಕ್ಕಳು. "ಅದು ಸತ್ಯವೇ ದೇವರು ಪೌಲನ ಬಗ್ಗೆ ಕಾಳಜಿವಹಿಸಿದನು - ಆದರೆ ಪೌಲನು ಆ ಪರಿಸ್ಥಿತಿಯಲ್ಲಿ ಯಾವ ರೀತಿಯಲ್ಲಿ ವರ್ತಿಸಿದನೆಂದು ನೀನು ಅರಿಯಬೇಕು. ಅದು ಒಂದು ವೇಳೆ, ಹಾವಿನ ಕಡಿತ, ಕೆಟ್ಟ ಮಾತುಗಳು, ಅಥವಾ ತಪ್ಪಾದ ಅರ್ಥ ಆಗಿದ್ದರೂ, ಪೌಲನು ಆ ತುಣುಕುಗಳ ಬಳಿಗೆ ಹೋಗಲಿಲ್ಲ." ನೀನು ಇರಬಾರದ ಸ್ಥಳದಲ್ಲಿ ಇರುವಾಗ ಇವುಗಳೆಲ್ಲವೂ ಅನಗತ್ಯವಾದ ಸಂಗತಿಗಳಾಗಿರುತ್ತವೆ. ನಾನು ಆಕೆಯನ್ನೇ ದೃಷ್ಟಿಸಿದೆನು. ನೆನ್ನೆ ದಿವಸ ನನ್ನ ಜೀವಿತದಲ್ಲಿ ಜರುಗಿದ ವಿಚಾರದ ಬಗ್ಗೆ ನಾನು ಬೇಸರಗೊಂಡಿದ್ದೇನೇ? ಅಭಿಲಾಷೆ ಇಲ್ಲದ ಸನ್ನಿವೇಶಗಳಲ್ಲಿ ನನ್ನ ವರ್ತನೆಗಳು ಸರಿಯಾಗಬೇಕು!*

## "ಸಹಾಯವನ್ನು ಪಡೆಯಲು, ಹೆಮ್ಮೆ ಇರದವನಾಗಿರು" (28:7)

ದೇವರ ಅನುಗ್ರಹದಲ್ಲಿ, ಪೌಲ ಮತ್ತು ಅವನ ಸಂಗಡಿಗರು, ಬಹು ಪ್ರಮುಖವಾದ ವ್ಯಕ್ತಿಯು ವಾಸಿಸುತ್ತಿದ್ದ ದ್ವೀಪದಲ್ಲಿ ಎಸೆಯಲ್ಪಟ್ಟವರಾಗಿದ್ದರು. ಲೂಕನು ಇದರ ಕುರಿತು, "ಆ ಸ್ಥಳದ ಸಮೀಪದಲ್ಲಿ ದ್ವೀಪದ[32] ಮುಖ್ಯಸ್ಥನಾದ ಪೊಪ್ಲಿಯನೆಂಬುವನು ಇದ್ದನು" (ವಚನ 7ಎ). "ಮುಖ್ಯಸ್ಥನು" ಎಂದರೆ ರೋಮಾಯದವರು ಮೆಲೀತೆಯ ದ್ವೀಪದ ಮುಖ್ಯಸ್ಥನನ್ನಾಗಿ ನೇಮಿಸಿದ ಅಧಿಕಾರಿಯಾಗಿದ್ದನು, ಅದನ್ನು "ಗ್ರೇಶಿಯೋ - ರೋಮನ್" ಬರಹದಲ್ಲಿ ನೋಡುತ್ತೇವೆ.[33]

*ಕೆಲವರು ಬೆಂಕಿ ಆರಿಹೋಗದಂತೆ ನೋಡಿಕೊಳ್ಳುತ್ತಿರುವಾಗ, ಹಡಗಿನ ಕೆಲವು ಜನರು ತಂಗುವದಕ್ಕಾಗಿ ಕೆಲವರು ಸ್ಥಳವನ್ನು ಹುಡುಕುತ್ತಿದ್ದರು. ಆ ಅಧಿಕಾರಿಯು ಪೌಲ, ಹಾಗೂ ಅವನ ಸಂಗಡಿಗರನ್ನು[34] ತನ್ನ ಮನೆಗೆ ಆಹ್ವಾನಿಸಿ ಅತಿಥಿ ಸತ್ಕಾರ ಮಾಡುವ ದರ್ಶನವನ್ನು ತೋರಿದನು, ಮತ್ತು ಇತರೆ ಏರ್ಪಾಟು ಆಗುವವರೆಗೆ ತನ್ನ ಮನೆಯಲ್ಲಿ ಅವರನ್ನು ಇಟ್ಟುಕೊಂಡಿದ್ದನು (ವಚನ 7ಬಿ).[35] ಈಗ ಚಿತ್ರಣವು ಬಿರುಗಾಳಿ ಬೀಸುತ್ತಿದ್ದ ಸಮುದ್ರ ತೀರದಿಂದ, ಅಧಿಕಾರಿಯ ಬೆಚ್ಚನೆಯ ಕೋಣೆಗೆ ಬದಲಾಗುತ್ತಿದೆ.*

*ಅಜ್ಜಿಯು ತನ್ನ ದುಪ್ಪಟದಿಂದ ನೀರನ್ನು ಝೋಡಿಸುತ್ತಾ! "ನೋಡು ಪೌಲನು ಪೊಪ್ಲಿಯನನೊಂದಿಗೆ, ಉತ್ತಮವಾದ ಬಿಸಿ ಊಟವನ್ನು ಮಾಡುತ್ತಿರುವನು," "ಅನೇಕ ವಾರಗಳ ನಂತರದ ಪ್ರಥಮ ಊಟವಾಗಿದೆ. ನಂತರ ಇದನ್ನು ಗಮನಿಸಿ: ಪೌಲನು ದೃಢಮನಸ್ಸಿನವರು ಹಾಗು ಸ್ವಾಭಿಮಾನದ ವ್ಯಕ್ತಿಯಾಗಿದ್ದರೂ, ಸಹಾಯವನ್ನು ಸ್ವೀಕಾರ ಮಾಡಿದನು. ದ್ವೀಪ ನಿವಾಸಿಗಳ ಸಂಗಡ ಬೆಂಕಿ ಕಾಯಿಸಿಕೊಂಡನು, ಈಗ ಅವನು*

*ದೇಶಾಧಿಪತಿಯ ಅತಿಥ್ಯವನ್ನು ಸ್ವೀಕರಿಸಿದನು. ನೀನು ಇರಬಾರದ ಸ್ಥಳದಲ್ಲಿ ಇರುವಾಗ, ಸವಾಲುಗಳನ್ನು ಎದುರಿಸಲು ನಿನಗೆ ಸಹಾಯದ ಅಗತ್ಯತೆ ಇರುತ್ತದೆ. ಅದನ್ನು ಸ್ವೀಕರಿಸುವಲ್ಲಿ ಬಿಗುಮಾನವನ್ನು ಬಿಡಬೇಕಾಗುತ್ತದೆ."*

*ಅಜ್ಜಿಯು ಸಹ ಸ್ವಾಭಿಮಾನದವಳಾಗಿದ್ದರಿಂದ, ಈ ಸಲಹೆಯನ್ನು ಕೇಳಿ ನಾನು ಮುಗುಳ್ನಗೆ ತೋರಿದೆನು - ಆದರೆ ಅವಳು ಹೇಳಿದ ವಿಚಾರದಲ್ಲಿನ ಅರ್ಥವನ್ನು ನಾನು ಗ್ರಹಿಸಿದೆನು. ನನ್ನ ಸ್ವಂತ ಶಕ್ತಿಯಿಂದ, ನಾನು ಇರುವಂಥ ಸನ್ನಿವೇಶವನ್ನು ಎದುರಿಸಲು ಸಾಧ್ಯವಿಲ್ಲ. ನಮ್ಮನ್ನೆ ಆತುಕೊಳ್ಳುವದರಲ್ಲಿ ತಪ್ಪಿರುವದಿಲ್ಲ; ಲೋಕದ ಜನರು ಇತರರ ಲಾಭದಿಂದ ಜೀವಿಸಲು ಬಹಳ ಸಂತಸವುಳ್ಳವಾಗಿರುವರು. ಆದಾಗ್ಯೂ ಇತರರು ನೀಡುವ ಸಹಾಯವನ್ನು ನಿರಾಕರಿಸುವದು ಮೂರ್ಖತನದ ಉತ್ತುಂಗವಾಗಿರುತ್ತದೆ. ಹೇಗೂ ನನ್ನ ಕಷ್ಟದಲ್ಲಿ ಇತರರ ಸಹಾಯದ ಅಗತ್ಯವಿರುತ್ತದೆ.*[36]

## "ಇತರರಿಗೆ ಸಹಾಯ ಮಾಡುವಲ್ಲಿ ಸ್ವಾರ್ಥಿಗಳಾಗಿರಬೇಡಿರಿ" (28:8)

*ಆ ಊಟದ ಸಮಯದಲ್ಲಿ ನಡೆದ ಅವರ ಮಾತುಕಥೆಗಳನ್ನು ಹತ್ತಿರವಾಗಿ ಹೋಗಿ ಕೇಳಿಸಿಕೊಳ್ಳೋಣ. ಪ್ರಾಯಶಃ ಪೌಲನು ತನ್ನ ಹಡಗಿನ ಅನುಭವವನ್ನು ಇತರರೊಂದಿಗೆ ಹಂಚಿಕೊಂಡಿರಲು, ಕಾತುರನಾಗಿರಬಹುದು. ಆದರೆ ಪೌಲನು ತನ್ನ ಅತಿಥೇಯರ ಮಾತನ್ನು ಆಲಿಸುತ್ತಿದ್ದನು, ಅವನ ಹೃದಯದ ತುಮುಲಗಳನ್ನು ಆಲಿಸುತ್ತಿದ್ದನು.*

*ಅಧಿಕಾರಿಯ ತಂದೆಯು ಜ್ವರದಿಂದಲೂ, ರಕ್ತಬೇಧಿಯಿಂದಲೂ*[37] *ಪೀಡಿತನಾಗಿ ಮಲಗಿದ್ದನು*[38] *(ವಚನ 8ಎ). ಆಗ ಪೌಲನು ಅವನ ಬಳಿಗೆ ಬೇಗನೆ ಹೋಗಿ (ವಚನ 8ಬಿ). ದೇವರ ಪ್ರಾರ್ಥನೆ ಮಾಡಿ ಅವನ ಮೇಲೆಕೈಗಳನಿಟ್ಟು*[39] *ಅವನನ್ನು ವಾಸಿಮಾಡಿದನು (ವಚನ 8ಸಿ). ನಂತರ ಅವನು ಪೊಪ್ಲಿಯಾನನನ್ನು ಅವನ ಬಳಗದವರನ್ನು ಕರೆದನು (9:41 ನೋಡಿರಿ). ಈಗ ಆ ಮನೆಯವರು ಆನಂದಗೊಂಡರು!*

*ಅಜ್ಜಿಯು ತನ್ನ ಕಣ್ಣೀರನ್ನು ಒರೆಸುತ್ತಾ, ಪೌಲನು ವೃದ್ಧ ಮನುಷ್ಯನಿಗಾಗಿ ಹೊಂದಿದ್ದ ಅನುಕಂಪವನ್ನು ನೋಡಿದಳು. ನಂತರ ಆಕೆ ನನಗೆ, "ಪೌಲನು ಕರುಣೆಗೆ ಕರುಣೆಯನ್ನು ಹೇಗೆ ಹಿಂತಿರುಗಿಸಿದನೆಂದು ಅರಿತುಕೊಂಡೆಯಾ?" ನಾನು ನನ್ನ ತಲೆಯನ್ನು ಅಲ್ಲಾಡಿಸಿದನು ಆಕೆ ಮುಂದುವರೆದು: "ಪೌಲನು ತಾನು ಇರಬಾರದ ಸ್ಥಳದಲ್ಲಿ ಇರುವಾಗ, ತನಗಾಗಿ ಮರುಕಗೊಳ್ಳಲಿಲ್ಲ. ಅದರ ಬದಲಾಗಿ ಇನ್ನೊಬ್ಬನಿಗಾಗಿ ಮರುಕಗೊಂಡನು. ಬಡವನಾದ ನಾನು ಎನ್ನುವದಕ್ಕಿಂತಲೂ, ಇನ್ನೊಬ್ಬನಿಗಾಗಿ ಅನುಕಂಪ ಪಡುವದು ಉತ್ತಮವಾದ ಮಾರ್ಗವಾಗಿರುತ್ತದೆ." ಅನೇಕ ಸಾರಿ ಸ್ವ - ಚಿಂತನೆಯು, ಸ್ವ-ಕೇಂದ್ರಿಕೃತವಾದ ಜೀವನವಾಗುತ್ತದೆ. ಅದನ್ನು ನಾನು ನನ್ನ ಜೀವಿತದಲ್ಲೂ ಹಾಗೂ ಇತರರ ಜೀವಿದಲ್ಲೂ ಗಮನಿಸಿರುವೆನು. "ದೇವರೇ ಇತರರಿಗಾಗಿ ಅನುಕಂಪ ಹೊಂದಿದ ವ್ಯಕ್ತಿಯನ್ನಾಗಿ ಮಾಡು ಎಂಬುದು ನನ್ನ ಪ್ರಾರ್ಥನೆಯಾಗಿದೆ."*

## "ದೇವರಲ್ಲಿ ಕಾರಣವಿದೆ" (28:9)

*ಈ ಅದ್ಭುತವಾದ ಸ್ವಸ್ಥತೆಯ ವರದಿಯು ಬೇಗನೆ ಆ ನಡುಗಡ್ಡೆಯಲ್ಲಿ ಹರಡಿತು ಇದಾದ ಮೇಲೆ ಆ ದ್ವೀಪದಲ್ಲಿದ್ದ ಮಿಕ್ಕಾದ ರೋಗಿಗಳು ಅವನ ಬಳಿಗೆ ಬಂದು ಸ್ವಸ್ಥರಾದರು (ವಚನ 9).*[40]

ಗ್ರೀಕ್ ಭಾಷೆಯಲ್ಲಿ ವಚನ 9ರ "ಅವನ ಬಳಿಗೆ" ಎಂಬ ಪದಗಳು ಇರುವದಿಲ್ಲ. ಮೂಲ ಅನುವಾದದಲ್ಲಿ, "ಮಿಕ್ಕಾದವರು" ಸ್ವಸ್ಥರಾದರು ಎಂದು ಇರುತ್ತದಷ್ಟೆ (KJV ನೋಡಿರಿ). ಹಾಗೂ ವಚನ 9ರಲ್ಲಿ "ಸ್ವಸ್ಥರಾದರು" ಎಂಬದು ವಚನ 8ಕ್ಕೆ ಹೋಲಿಸಿದರೆ ಅದರಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ವಚನ 9ರಲ್ಲಿ "ವೈದ್ಯಕೀಯ ಶುಶ್ರೂಷೆ ಮಾಡು" ಎಂಬುದಾಗಿದೆ.[41]

ಈ ಅತಿಥಿ ಸತ್ಕಾರ ಪಡಕೊಂಡವರಲ್ಲಿ ಲೂಕನೂ ಸಹ ಭಾಗಿಯಾಗಿದ್ದನು ಎಂಬುದನ್ನು ಇದು ರುಜುವಾತು ಪಡಿಸುತ್ತದೆ (ವಚನ 10). ಒಂದು ವೇಳೆ ಲೂಕನು ಸಹ ಪೌಲನೊಂದಿಗೆ ಚಿಕಿತ್ಸೆ ನೀಡಿರಬಹುದು ಎಂಬ ಸಂಶಯವಿದೆ: ಲೂಕನು ತನ್ನ ಔಷಧಿಯೊಂದಿಗೆ ಪೌಲನು ಅದ್ಭುತದೊಂದಿಗೆ ಬಾರ್ಕ್ಲೇಯವರ ಪ್ರಕಾರ "ಇದರಲ್ಲಿ ವೈದ್ಯಕೀಯ ಸೇವೆ ನೀಡಿದ ಸೇವಕರ ಕುರಿತಾಗಿ ಪ್ರಥಮವಾಗಿ ಬರೆಯಲ್ಪಟ್ಟಿದೆ."[42]

ಪೌಲನು ಮೆಲೀತೆಯಲ್ಲಿ ತಂಗಿದ್ದ ಮೂರು ತಿಂಗಳುಗಳ ಕಾಲದ ಕಾರ್ಯವನ್ನು ವಿಶ್ಲೇಷಣೆ ಮಾಡೋಣ. ಪೌಲನು ಪ್ರಸಂಗ ಮಾಡಿದನು ಎಂದು ಲೂಕನು ದಾಖಲಿಸಿರುವದಿಲ್ಲ, ಆದರೆ ಅವನು ಪ್ರಸಂಗ ಮಾಡದೆ ಇರುವದನ್ನು ಊಹಿಸಲು ಸಾಧ್ಯವಿಲ್ಲ. ಹಡಗಿನವರಿಗಾಗಿ ಪೌಲನು ಪ್ರತಿನಿಧಿಯಾಗಿ ಕೆಲಸ ಮಾಡುವಂತೆ ದೇವರು ಮಾಡಿದ್ದನು ಮತ್ತು ದೇವರು ಅವರ ಜೀವಿತಗಳನ್ನು ಕಾಪಾಡಿದ್ದನು; ಪೌಲನನ್ನು ಹಾವಿನ ಕಡಿತದಿಂದ ತಪ್ಪಿಸುವಲ್ಲಿ ದೇವರು ಕಾರ್ಯನಿರ್ವಹಿಸಿ, ಆ ದ್ವೀಪದ ಜನರ ಹೃದಯಗಳನ್ನು ಸಿದ್ಧಪಡಿಸಿದ್ದನು, ಮತ್ತು ಪೌಲನಿಗೆ ಸ್ವಸ್ಥ ಮಾಡುವ ಶಕ್ತಿಯನ್ನು ನೀಡಿದ್ದನು. ದೇವರು ಎಂದಿಗೂ ಅವಕಾಶಗಳನ್ನು ವ್ಯರ್ಥಮಾಡುವದಿಲ್ಲ![43] ಪೌಲನು ಯೇಸುವಿನ ನಾಮದಲ್ಲಿ ಸ್ವಸ್ಥಪಡಿಸಿದನು (19:13); ದೈಹೀಕವಾದ ಸ್ವಸ್ಥತೆಯನ್ನು ನೀಡಿದ ಯೇಸುವಿನ ಕುರಿತು, ಆತನು ಆತ್ಮೀಕವಾಗಿಯೂ ಸ್ವಸ್ಥಮಾಡುವನು ಎಂದು ಸಾರುವದು ಈಗ ಸುಲಭವಾಯಿತಲ್ಲವೇ![44] ಪ್ರೇರಿತವಾಗದ ಹೇಳಿಕೆಯ ಪ್ರಕಾರ ಪೌಲನು ಅ ನಡುಗೆಡ್ಡೆಯಲ್ಲಿ ಸುವಾರ್ತೆಯನ್ನು ಸಾರಲಾಗಿ, ಅವನು ಆ ದ್ವೀಪವನ್ನು ತೊರೆಯುವಾಗ, ಪೊಪ್ಲಿಯೋನನ ಮನೆಯಲ್ಲಿ ಒಂದು ಸಭೆಯನ್ನು ಸ್ಥಾಪಿಸಿದನು ಎಂಬುದಾಗಿದೆ. ಆ ಸಂಪ್ರದಾಯದ ಮೊದಲ ಭಾಗವನ್ನು ನಾನು ನಂಬುತ್ತೇನೆ.[45] ಪ್ರಾಯಶಃ ಹಡಗಿನಲ್ಲಿ ಇದ್ದವರ ಕೆಲವರ ಸಂಗಡಲೂ ಪೌಲನು ಸುವಾರ್ತೆಯನ್ನು ಸಾರಿರಬಹುದು. ಮುಖ್ಯವಾಗಿ ಕೆಲವು ಖೈದಿಗಳು ರೋಮಾಯದ[46] ತೀರ್ಪಿನಲ್ಲಿ ಮರಣವನ್ನು ಹೊಂದುವವರಾಗಿದ್ದರು. ಅವರು ಅದನ್ನು ನಿರೀಕ್ಷೆವುಳ್ಳವರಾಗಿ ಎದುರಿಸುವ ಸಾಧ್ಯತೆಗಳಿದ್ದವು ಎಂದು ನಾನು ಯೋಚಿಸುತ್ತೇನೆ.

*ಪೌಲನು ಇರಬಾರದ ಸ್ಥಳದಲ್ಲಿ ಇದ್ದರೂ ದೇವರಿಗಾಗಿ ಅರ್ಥಗರ್ಭಿತವಾದ ಕೆಲಸವನ್ನು ಮಾಡಿದ್ದನು ಎಂದು ನಾನು ತೀರ್ಮಾನಿಸುತ್ತೇನೆ. "ಅಜ್ಜಿಯು ನನ್ನನ್ನು ಗಮನಿಸುತ್ತಿರುವಾಗ, ಮತ್ತು?" ನಾನು ಮುಂದುವರೆಸಿ, ನಾವುಗಳು ಸಹ ಅದನ್ನು ಮಾಡಬಹುದಲ್ಲವೇ. ಈ ಮುಂದಿನ ಹೇಳಿಕೆಯನ್ನು ನಾನು ಇಷ್ಟಪಡುತ್ತೇನೆ. "ನೀನು ಇರಬಾರದ ಸ್ಥಳದಲ್ಲಿ ಯಾವಾಗಲೂ ಇರಲು ಸಾಧ್ಯವಿಲ್ಲ, ಆದರೆ ನೀನು ದೇವರ ಚಿತ್ತದಲ್ಲಿರುವದಾದರೆ, ನೀನು ಇರಬೇಕಾದ ಸ್ಥಳದಲ್ಲಿಯೇ ಯಾವಾಗಲೂ ಇರತ್ತಿ."[47] ಅಜ್ಜಿ ನನ್ನನ್ನು ಇನ್ನೊಂದು ಸಾರಿ ನೋಡುವಾಗ: ಅದಕ್ಕೆ? ನಾನು ಸೇರಿಸಿ, "ನಾವು ಇರಬಾರದ ಸ್ಥಳದಲ್ಲಿ ನಾವಿರುವಾಗ, ದೇವರಲ್ಲಿ ಇದಕ್ಕೆ ಕಾರಣವಿರುತ್ತದೆ ಎಂದು ಅರಿಯಬೇಕು, ಮತ್ತು ದೇವರು ನನ್ನನ್ನು ಏಕೆ ಇಲ್ಲಿ ಇಟ್ಟಿರುವನೆಂದು ಗ್ರಹಿಸಬೇಕು. ದೇವರ ಮನಸ್ಸಿನಲ್ಲಿ ನಮಗಾಗಿ ಹೆಚ್ಚು ಅರ್ಥಗರ್ಭಿತವಾದ ಸೇವೆಯು ಇರುತ್ತದೆ, ಅದನ್ನು ದೇವರು ನಾವು ಇರಬಾರದ ಸ್ಥಳದಲ್ಲಿ ಮಾಡಿ ತೋರಿಸುವವನಾಗಿರುತ್ತಾನೆ." ನಂತರ ಅಜ್ಜಿಯು ಮುಗುಳ್ನಗುತ್ತಾ "ಬಹಳ ಒಳ್ಳೆಯದು" ಎಂದು ಹೇಳಿದಳು.*

## "ದೇವರು ನಿಮಗಾಗಿ ಕಾಳಜಿ ವಹಿಸುವನು" (28:10, 11)

ಮೆಲೀತೆಯಲ್ಲಿನ ಮೂರು ತಿಂಗಳು ಅತಿಬೇಗನೆ ಕಳೆದು ಹೋದವು. ಲೂಕನು ಇದರ ಕುರಿತು ತಿಳಿಸಿ, "ಅವರು ನಮ್ಮನ್ನು ಬಹಳವಾಗಿ ಸನ್ಮಾನಿಸಿದರು" (ವಚನ 10ಎ). ಗ್ರೀಕ್ ಭಾಷೆಯಲ್ಲಿ ಇದನ್ನು "ಗೌರವ ಧನ"[48] ಎನ್ನುವರು. ಆದರೆ ಪೌಲನು ತಾನು ಮಾಡಿದ ಸೇವೆಯ ನಿಮಿತ್ತ ಗೌರವ ಧನವನ್ನು ಪಡೆದಿರುವ ವಿಚಾರದಲ್ಲಿ ಸಂದೇಹವಿದೆ. ಪ್ರಾಯಶಃ ಆ ದ್ವೀಪದವರು ಪೌಲನ ಕುರಿತು ಅಧಿಕ ಅಭಿಮಾನವುಳ್ಳ ವರಾಗಿದ್ದರೂ ಎಂಬ ಅರ್ಥವನ್ನು

ಲೂಕನು ನೀಡಿರಬಹುದು (2:42 ನೋಡಿರಿ).

ಮೂರು ತಿಂಗಳಾದ ಮೇಲೆ ಆ ಶತಾಧಿಪತಿಯು ಇನ್ನೊಂದು ಅಲೆಕ್ಸಾಂಡ್ರಿಯದ ಹಡಗನ್ನು ಕಂಡುಕೊಂಡನು (28:11), ಒಂದು ವೇಳೆ ಆ ಹಡಗು ಮೆಲೀತೆಯ ಪ್ರಧಾನ ಪಟ್ಟಣವಾದ "ವಲ್ಲೇಟ"ದಲ್ಲಿ ಚಳಿಗಾಲವನ್ನು ಕಳೆದಿರಬಹುದು. ಆ ಹಡಗು ಅವರನ್ನು ಇತಾಲ್ಯಕ್ಕೆ ಸಾಗಿಸುತ್ತಿತ್ತು.

ಅಂತಿಮವಾಗಿ ಪೌಲನು ಆ ದ್ವೀಪವನ್ನು ಬಿಡುವ ಸಮಯವು ಬಂದಿತು. ಪೌಲನು ಮೆಲೀತೆಗೆ ಬಂದಾಗ, ತಾನು ಇರಬಾರದ ಸ್ಥಳದಲ್ಲಿ ಬಂದಿದ್ದನು, ಆದರೆ ಮೂರು ತಿಂಗಳುಗಳ ನಂತರ, ಅವನು ಆ ಸ್ಥಳವನ್ನು ಬಿಟ್ಟು ಹೋಗುವದು ದುಃಖಕರವಾಗಿಬಹುದು. ಪ್ರತಿಯೊಬ್ಬರು ಸುಳಿಗಾಳಿಗೆ ಸಿಲುಕಿಕೊಂಡಿದ್ದರು; ಪೌಲನು ಮತ್ತು ಅವನ ಸಹಚರರು ಒದ್ದೆ ಬಟ್ಟೆಗಳನ್ನು ಹೊಂದಿದವರಾಗಿ ಸಮುದ್ರದ ತೀರದಲ್ಲಿ ಇಳುಕೊಂಡಿದ್ದರು. ಈಗ ಅವನ ಹೊಸ ಸ್ನೇಹಿತರು ಅವರೆಲ್ಲರೂ ರೋಮಾಯವನ್ನು ಸುರಕ್ಷಿತವಾಗಿ ಸೇರುವಂತೆ ಸಕಲ ವಿಧವಾದ ಸಹಾಯವನ್ನು ಮಾಡಿದ್ದರು. ಲೂಕನು ಅದನ್ನು ಒಂದೇ ಚಿತ್ರಣದಲ್ಲಿ ತಿಳಿಸಿರುವನು: "ನಾವು ಬಿಟ್ಟು ಹೊರಟಾಗ ನಮಗೆ ಅವಶ್ಯವಾದ ಪದಾರ್ಥಗಳನ್ನು ತಂದು ಹಡಗಿನಲ್ಲಿಟ್ಟರು" (ವಚನ 10ಬಿ).

*ನಮ್ಮ ಈ ಪ್ರವಚನವನ್ನು ಅಜ್ಜಿಯು ಅಂತ್ಯಗೊಳಿಸಬೇಕೆಂದು ನಾನು ಕಾದುಕೊಂಡೆನು. "ಅದನ್ನು ನೀನೆ ಅಂತ್ಯಗೊಳಿಸು" ಎಂದು ನನ್ನನ್ನು ಚಕಿತಗೊಳಿಸಿದಳು. ಪೌಲ ಮತ್ತು ಲೂಕರ ಸುತ್ತಲೂ ಜನರು ಮೊಣಕಾಲೂರಿರುವದನ್ನು ತೋರಿಸಿ (ನೋಡಿರಿ 21:5), ಅದರಿಂದ ನೀನು ಏನನ್ನು ಕಲಿತಿರುವಿ? ಅಂದಳು. ನಾನು ನನ್ನ ಆಲೋಚನೆಗಳನ್ನು ಒಗ್ಗೂಡಿಸಿ, ನನ್ನ ಬೆರಳುಗಳಲ್ಲಿ ಲೆಕ್ಕ ಹಾಕುತ್ತಾ: (1) ನೀವು ಇರಲಾರದ ಸ್ಥಳದಲ್ಲಿ ಇರುವಾಗ, ಉತ್ತಮ ವಾದ ಮನೋಭಾವವನ್ನು ಹೊಂದಿದ್ದರೆ, ಅಲ್ಲಿ ನಿಮಗೆ ಯಾವ ಕೇಡೂ ಸಂಬವಿಸದು. (2) ನೀವು ಕಾರ್ಯ ಪವೃತ್ತ ರಾಗಿದ್ದರೆ, ಸಮಯವು ಬೇಗನೆ ಕಳೆದು ಹೋಗುವದು. (3) ನಿಮ್ಮನ್ನು ಹೊರತು ಪಡಿಸಿ, ಇತರರಿಗಾಗಿ ಚಿಂತನೆ ಮಾಡುವಾಗ, ಹೊಸ ಸ್ನೇಹಿತರನ್ನು ಸಂಪಾದಿಸಲು ಸಾಧ್ಯ ಇಲ್ಲದೆ ಹೋದರೆ ಅದು ಅಸಾಧ್ಯವೆ. (4) ನೀವು ಇರಬಾರದ ಸ್ಥಳದಲ್ಲಿ ಇರುವಾಗ, ದೇವರಿಗೆ ಸಮೀಪ ಸ್ತರಾಗಿದ್ದರೆ, ನೀವು ಇರಬೇಕಾದ ಸ್ಥಳದಲ್ಲಿ ಆಶೀರ್ವಾದವನ್ನು ಸ್ವೀಕರಿಸುವಾಗಿ ಅಲ್ಲಿಯೂ ನೀವು ಆಶೀರ್ವಾದ ಹೊಂದುವಿರಿ. "ಅಜ್ಜಿಯು ದೊಡ್ಡದಾಗಿ ನಗುತ್ತಾ ಡೇವಿಡ್ ನೀನು ಅದನ್ನು ಮಾಡುವದಾದರೆ, ಒಂದ ದಿನ ನೀನು ಪ್ರಸಂಗಿಯಾಗುವಿ" ಅಂದಳು.*

ಆ ಪ್ರೋತ್ಸಾಹವನ್ನು ಪಡೆದ ನಂತರ ನಾನು ಅಜ್ಜಿಯನ್ನು "ಬೀಳ್ಕೊಟ್ಟೆ." ಆಕೆಯು ನನ್ನೊಂದಿಗೆ ಮಾತನಾಡಿದ ಅಂಶಗಳನ್ನು ಗ್ರಹಿಸಿದಿರಿ ಎಂದು ನಾನು ನಂಬುತ್ತೇನೆ. ಹಾಗಾದರೆ ಅದನ್ನು ನಿಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಿರಿ ಎಂದು ಮನವಿ ಮಾಡುತ್ತೇನೆ.

## ಮುಕ್ತಾಯ

ನೀವು ಇರಬಾರದ ಸ್ಥಳದಲ್ಲಿ ಇರುವದನ್ನು ಬೇಗನೆ ಅರಿತುಕೊಳ್ಳುವಿರಿ. ಆ ಸ್ಥಳದಲ್ಲಿ ನೀವುಗಳು ಇರವಾಗ, ನೀವುಗಳು ಆತನಿಗಾಗಿ ಉತ್ತಮವಾದದ್ದನ್ನೇ ಮಾಡುವಂಥ ಅವಕಾಶವನ್ನು ದೇವರು ನಿಮಗೆ ನೀಡಲಿ ಎಂದು ನಾನು ಹಾರೈಸುತ್ತೇನೆ![49]

ನಾವು ಮಾತನಾಡುತ್ತಿರುವ, ಸ್ಥಳದಲ್ಲಿ, ನೀವುಗಳು (ಸ್ಥಳ ಅಥವಾ ಪರಿಸ್ಥಿತಿ) ನಿರ್ಭಂಧಕ್ಕೊಳಗಾಗರಬಹುದು. ಅಂತಹ ಸ್ಥಳದಲ್ಲಿರುವಾಗ, ಅದರ ಕುರಿತು ನೀವು ಏನನ್ನಾದರೂ ಮಾಡಬಹುದು. ಆಗ ಕೋಪಗೊಳ್ಳದೆ, ಮಾಡಬೇಕಾದದ್ದನ್ನೇ ಮಾಡಿರಿ!

*ದೇವರಿಂದ ದೂರವಾಗಿರುವ* ಸನ್ನಿವೇಶವು ಬಹಳ ಭಯಂಕರವಾದ ಸ್ಥಳವಾಗಿರುತ್ತದೆ

(ಯೆಶಾಯ 59:1, 2). ಅಲ್ಲಿ ನೀವು ಎಂದಿಗೂ ಇರಬಾರದು, ನೀವು ಅಲ್ಲಿ ಮರಣ ಹೊಂದುವದಾದರೆ, ನಿಮ್ಮ ಜೀವನ ನರಕದಲ್ಲಿ ಅಂತ್ಯಗೊಳ್ಳುತ್ತದೆ. ಅದು ಸಹ ನೀನು ಇಚ್ಚಿಸದ ಸ್ಥಳವಾಗಿದೆ - ಆದರೆ ದೇವರ ಕಡೆಗೆ ತಿರುಗಿಕೊಳ್ಳಲು ಸಮಯವಿರುವದಿಲ್ಲ! ಈ ಪರಿಸ್ಥಿತಿಯಲ್ಲಿಯೂ ನೀನು ಒಂದು ಕಾರ್ಯವನ್ನು ಮಾಡಬಹುದು ಎಂಬ ಶುಭಸಮಾಚಾರವಿದೆ - ನೀನು ಇನ್ನೂ ಕಾಯುತ್ತಿರಬೇಡ. ನೀನು ಇರಬಾರದ ಸ್ಥಳದಲ್ಲಿ ಇರುವಾಗ ಯಾವ ಆತ್ಮೀಕ ಕಾರ್ಯವನ್ನು ನೀನು ಮಾಡಬಹುದು? ದೇವರಲ್ಲಿ ಭರವಸವಿಡು, ಪಾಪಕ್ಕಾಗಿ ಮಾನಸಾಂತರಪಡು, ಮತ್ತು ಆತನ ಕಡೆಗೆ ತಿರುಗಿಕೋ.[50] ಆತನು ನಿನಗೆ ಬಿಡುಗಡೆ ನೀಡುವನು!

## ಪ್ರಸಂಗದ ಟಿಪ್ಪಣಿ

ಪೌಲನ ಮೆಲೀತೆಯ ಹಡಗಿನ ಅಪಘಾತದ ಕಥೆಯ ಕುರಿತು, ಪ್ರವಾಸಿಗಳಿಗೆ ಕೆಲವರು ತೋರಿದ ಅನುಕಂಪ ಎಂಬ ತಲೆಬರಹವನ್ನು ನೀಡಬಹುದು, ಅದು ಮಕ್ಕಳು ಸಹ ಮೆಚ್ಚುವಂಥದ್ದಾಗಿರುತ್ತದೆ.

---

ಟಿಪ್ಪಣಿಗಳು

[1]ಪೌಲನ ರೋಮಾಯಕ್ಕೆ ಪ್ರಯಾಣಿಸಿದ ನಕ್ಷೆ ನೋಡಿರಿ. [2]ನಾವು ದುಃಖಕ್ರಾಂತರಾಗಿರುವಾಗ, ದೇವ ಭಯವಿರುವ ಅಜ್ಜಿಯರು ಪ್ರೋತ್ಸಾಹ ನೀಡುತ್ತಾರೆ. [3]ಅಜ್ಜಿಯೆಂಬ ಪದಕ್ಕೆ ಹೆಸರುವಾಸಿಯಾದ ಪದವನ್ನು ಬಳಸಬಹುದು. ನಮ್ಮ ದೇಶದಲ್ಲಿ ಅಜ್ಜಿ ಅಥವ ಊಹೆಯ ಅಜ್ಜಿ ಎಂದು ಬಳಸುವುದುಂಟು ನನ್ನ ಪತ್ನಿ ಅವಳ ಮೊಮ್ಮಕ್ಕಳಿಗೆ "ನಾನಾ" ಆಗಿರುವಳು. ಇಂತ ಸಂದರ್ಭಗಳಲ್ಲಿ ನಿಮ್ಮದೇ ಆದ ಮಾತುಗಳನ್ನು ಬಳಸಿ. [4]ಈ ಪಾಠದಲ್ಲಿರುವ ಮುಖ್ಯಾಂಶಗಳು ಸಾಮಾನ್ಯವಾದ ಮಾತುಗಳಾಗಿವೆ ಇವುಗಳಲ್ಲಿ ಕೆಲವು ಜ್ಞಾನದ ವಾಕ್ಯಗಳಾಗಿವೆ. ಪ್ರಪಂಚದಲ್ಲಿ ಇರುವ ಇತರ ಭಾಗಗಳಲ್ಲಿ ಇವುಗಳನ್ನು ಬಳಸಬಹುದು. ಪ್ರಾಂತಿಯ ಮಾತುಗಳು ಭಿನ್ನವಾದ ಪದಗಳಲ್ಲಿ ಇದ್ದರು ಸಹ ಅವು ಅದೇ ಅರ್ಥವನ್ನು ಕೊಡಬಹುದು. [5]ಕೊನೆಯ ಎರಡು ವಾಕ್ಯಗಳಲ್ಲಿ ಚಲ್ಸ್ ಸ್ವಿಂಡಾಲ್‌ರವರ ಹೇಳಿಕೆಗಳು. Charles R. Swindoll, *The Strength of an Exacting Passion* (Anaheim, Calif.: Insight for Living, 1992), 144. [6]ಅಲ್ಲಿಯ ಸ್ಥಳೀಯ ಜನರಿಂದ ಮಾಹಿತಿ ಪಡೆದಿರಬಹುದು. [7]ಮೆಲೈಟೆ ಎಂಬದನ್ನು ಮೂಲ ಭಾಷೆಯಲ್ಲಿ "ಮೆಲೀತೆ" ಎಂದಿರುವರು, ಈ ದಿನ ಅದನ್ನು "ಮಾಲ್ಟ" ಎಂದು ಕರೆಯುವರು (ಕಲ್ಲಿರುವ ಸ್ಥಳ). [8]ಈ ಆಶ್ರಯದ ದ್ವೀಪಕ್ಕೆ ಸರಿಯಾದ ಹೆಸರನ್ನು ಇಟ್ಟಿದ್ದರು ಎಂಬದು ಲೂಕನು ಹೇಳಿಕೆ. [9]Rick Atchley, "Stuck on a Deserved Island," Sermon preached at the Southern Hills church of Christ, Abilene, Texas, on 19 April 1987. (Emphasis mine.) [10]ಗ್ರೀಕ್‌ನಲ್ಲಿ "ಸಾಧಾರಣವಲ್ಲ."

[11]ಗ್ರೀಕ್‌ನ "ಅನುಕಂಪ" ಅಂದರೆ "ಮನುಕುಲವನ್ನು ಪ್ರೀತಿಸುವವನು." [12]ವಸ್ತು ಪ್ರದರ್ಶನ ಆಟದ ದೊಡ್ಡದಾದ ತಿರುಗು ಚಕ್ರಗಳು. [13]Swindoll, 146. [14]Willam Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 187. [15]Richard N. Longenecker, "The Acts of the Apostles," *The Expositor's Bible Commentary,* ed. Frank E. Gaebelein, vol. 9 (Grand Rapids, Mich.: Zondervan Publishing House, 1981), 563. (ಈಗ ಶೇಕಡ 96ರಷ್ಟು ಮೇಲಿತೀಯ ಜನಸಂಖ್ಯೆ, ಪ್ರಪಂಚದಲ್ಲೆ ಹೆಚ್ಚಿನ ಜನಸಂಖ್ಯೆಯಷ್ಟಿದೆ.) [16]ಮಳೆಯಲ್ಲಿ ಕಟ್ಟಿಗೆಗೆ ಬೆಂಕಿ ಹಾಕುವದು ವಿಶೇಷ ಸವಾಲಾಗಿರುತ್ತದೆ. [17]Barclay, 187. [18]J. W. McGarvey, *New Commentary on Acts of Apostles*, vol. 2 (Delight, Ark.: Gospel Light Publishing Co., n.d.), 275. [19]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 510. [20]ಸ್ಥಳೀಯ ಭಾಷೆಯ ಪ್ರಕಾರ ಹೇಳಬಹುದು.

[21]ಮೆಲೀತೆಯಲ್ಲಿ ಈಗ ಯಾವುದೇ ವಿಷಪೂರಿತ ಹಾವುಗಳಿರುವದಿಲ್ಲ, ಜನ ಸಂದಣಿಯ ಸ್ಥಳವಾಗಿದೆ, ಒಂದು ಚದರ ಮೈಲಿಗೆ 3,000 ಸಾವಿರ ಜನರಿರುವರು. (ನಾನಿರುವ ಅರ್ಕನ್‌ಸಾಸ್‌ನಲ್ಲಿ ಚದರ ಮೈಲಿಗೆ 45 ಜನರಿರುವರು.) ಇದರ ನಿಮಿತ್ತ ಅನೇಕ ಕ್ರಿಮಿಕೀಟಗಳು ಮಾಯವಾಗಿವೆ. [22]ಪೌಲನು ಮಂದ ದೃಷ್ಟಿಯವನಾಗಿರಬಹುದು ಎಂದು ಕೆಲವು ಪಂಡಿತರು ಹೇಳುವರು (ಗಲಾತ್ಯ 4:15; 6:11), ಇದರ ನಿಮಿತ್ತ ಅವನು ಹಾವನ್ನು ನೋಡದೆ ಇರಬಹುದು. ನನ್ನ ಕೆಲವು ಸ್ನೇಹಿತರು ಒಳ್ಳೆಯ ದೃಷ್ಟಿ ಇದ್ದರೂ ಹಾವಿನ ಕಡಿತವನ್ನು ಹೊಂದಿದ್ದರು. [23]ಹಾವಿನ ವಿಚಾರವಿದ್ದರು, ಅದು ಪೌಲನಿಗೆ ಕಚ್ಚಲಿಲ್ಲವೆಂಬ ಅಭಿಪ್ರಾಯವಿದೆ. ಹಾಗದರೆ ಅದು ಹೇಗೆ ಅವನ ಕೈಗೆ ಬಿಗಿದು ಕೊಂಡಿತ್ತು? ಅವುಗಳು ಸುತ್ತಿಕೊಳ್ಳುವದಿಲ್ಲ, ಅದರ ಹಲ್ಲುಗಳ ಮಾಂಸ ಖಂಡಕ್ಕೆ ಚುಚ್ಚಿದ್ದರೆ ಮಾತ್ರ ಅದು ಜೋತಾಡಲು ಸಾಧ್ಯ. [24]"ನ್ಯಾಯ" ಅಂದರೆ ಗ್ರೀಕನ "ಡ್ರೆಕ್" ಅದು ಕ್ಯಾಪಿಟಲ್ ಯಿಂದ ಆರಂಭವಾಗುತ್ತದೆ. ದ್ವೀಪ ನಿವಾಸಿಗಳು ಅವರ ದೇವತೆಗಳ ಕುರಿತು ಡೈಕ್ ಎಂದು ಮಾತಾಡುತ್ತಿದ್ದರು (ಪುನರುತ್ಥಾನ ಪಾಠವನ್ನು ನೋಡಿರಿ). [25]ಪೌಲನ ಕೈಗಳನ್ನು ಸರಪಣಿಯಿಂದ ಬಿಗಿದಿರಬಹುದು (ಸಮುದ್ರಕ್ಕೆ ದುಮುಕುವಾಗ ತೆಗೆದಿರಬಹುದು) ಪೌಲನು ಸಹ ಖೈದಿಯೆಂದು ಅವರು ತಿಳಿದರು, ಆದರೆ ಅವನು ಎಸೆಗಿದ ಅಪರಾದವನ್ನು ಅರಿತಿರಲಿಲ್ಲ. [26]ಪುರಾತನ ಚರಿತ್ರೆಯಂತೆ ತಪ್ಪಿಸಿಕೊಂಡವರು ದೇವತೆಗಳಿಂದ ಸಂಹಾರವಾಗುವರು ಎಂದು ತಿಳಿದಿದ್ದರು, ಹಾವಿನ ಮೂಲಕ ದೇವತೆ ಮನುಷ್ಯನನ್ನು ಕೊಲ್ಲುತ್ತಿತ್ತು. [27]ಹಾವನ್ನು ಎತ್ತಿದಾಗ ಯಾವ ಅಪಾಯವು ಸಂಭವಿಸಲಿಲ್ಲ, ಹಾವಾಡಿಗರು ಇದನ್ನೇ ವಾಕ್ಯಕ್ಕನುಗುಣ ಎನ್ನುವರು (ಮತ್ತಾಯ 4:7). ಇದರಿಂದ ತಮ್ಮ ದೇಹಗಳನ್ನು ಅಪಾಯಕ್ಕೆ ಸಿಲುಕಿಸಿಕೊಳ್ಳುವರು (1 ಕೊರಿಂಥ 3:17). [28]"ಊದಿಕೊಳ್ಳು" ಎಂಬ ಗ್ರೀಕ್ ಪದವನ್ನು ಲೂಕನು ಬಳಸಿರುವನು. ಹಾವು ಕಚ್ಚಿದಾಗ, ವಿಷವು ನರನಾಡಿಗಳಲ್ಲಿ ಹರಿದು, ಅಂತರ್ಯದ ದೇಹದ ಭಾಗಗಳನ್ನು ನಿರ್ಜೀವ ಮಾಡುತ್ತದೆ. ನಂತರ ಊದಿಕೊಂಡು ಆ ಮನುಷ್ಯನು ಸಾಯುವನು. [29]ಪೌಲನನ್ನು ಕಚ್ಚಿದ ಹಾವು ವಿಷಪೂರಿತವಾಗಿರಲ್ಲಿ ಎಂಬ ಗುಮಾನಿ ಇದೆ. ಆದರೆ ದ್ವೀಪ ವಾಸಿಗಳು ಅದು ವಿಷದ ಹಾವುಎಂದು ತಿಳಿದರು. ಸತ್ಯವೇದದ ಅದ್ಭುತಗಳನ್ನು ನಂಬದೆ ಹೋದರೆ, ಸಂಶಯಗಳು ಉದ್ಭವಿಸುತ್ತವೆ. [30]McGarvey, 276 ಲುಸ್ತ್ರದಲ್ಲಿ, ಪೌಲ ಮತ್ತು ಬಾರ್ನಬರನ್ನು ದೇವತೆಗಳೆಂದು ಭಾವಿಸಿ ಮತ್ತು ಪೌಲನನ್ನು ಕೊಲ್ಲಲು ಪ್ರಯತ್ನಿಸಿದರು (*ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿ "ಮನ್ನಣೆಯಿಂದ ನಿಂದನೆಗೆ" ಎಂಬ ಪಾಠವನ್ನು ನೋಡಿ).

[31]Longenecker. 564. [32]ದ್ವೀಪದ ಮೊದಲನೆಯವರು ಎಂದು ಗ್ರೀಕ್ ಹೇಳುತ್ತದೆ. [33]Richard Oster, *The Acts of the Apostles,* Part 2, The Living Word Commentary Series (Austin, Tex.: Sweet Publishing Co., 1979), 174. [34]"ನಾವು" ಎಂದರೆ ಲೂಕನು ಎಷ್ಟು ಜನರನ್ನು ಅದರಲ್ಲಿ ಸೇರಿಸಿರುವನೆಂದು ಅರಿತಿರುವದಿಲ್ಲ ಹೇಗೂ ಪೊಪ್ಲಿಯನು ಹಲವರನ್ನು ಅಥವಾ ಎಲ್ಲರನ್ನು ಸತ್ಕರಿಸುವ ಸಾಧ್ಯತೆಯಿತ್ತು. [35]ಪೊಪ್ಲಿಯನ ಬಳಿ ಮೂರು ದಿವಸಗಳುಕಳೆದ ನಂತರ, ಮೂರು ತಿಂಗಳಲ್ಲಿ ಸಂಭವಿಸಿರುವದನ್ನು ಲೂಕನು ತಿಳಿಸಿರುವದಿಲ್ಲ. [36]ಕೆಲವು ಸಾರಿ ಸಹಾಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. [37]ಗ್ರೀಕ್‌ನಲ್ಲಿ "ಜ್ವರ" ಎಂದಿದೆ. [38]ಗ್ರೀಕ್‌ನಲ್ಲಿ "ರಕ್ತ ಭೇದಿಗೆ" "ದುಸೆಂಟೇರಿಯಾ" ಎನ್ನುವರು, ಅಧಿಕಾರಿಯ ತಂದೆಗೆ "ಮೆಲೀತೆ ಜ್ವರ" ಉಂಟಾಗಿತ್ತು ಎಂದು ಲೂಕನು ವೈದ್ಯಕೀಯ ಭಾಷೆಯನ್ನು ಬಳಸಿರುವನು, 2 ಅಥವಾ ಮೂರು ವರ್ಷಗಳಲ್ಲಿ ಸಾಯುವ ಸಾಧ್ಯತೆಯಿತ್ತು (ಅದು ಮೆಕೆಯಿಂದ ಬಂದ ಜ್ವರವೆಂದು 1887ರಲ್ಲಿ ಕಂಡು ಹಿಡಿದರು) "ಬ್ರೂಸಲೇಸಿಸ್" ಎಂದು ವೈಜ್ಞಾನಿಕ ಹೆಸರು ಅದು ಚಳಿ, ಜ್ವರ, ಭಾರ ಕಳೆದುಕೊಳ್ಳುವಿಕೆ, ಸಂದುಗಳಲ್ಲಿ ನೋವನ್ನು ಉಂಟುಮಾಡುತ್ತದೆ. [39]ಸುವಾರ್ತೆಯ ಸಮಯದಲ್ಲಿ ಹೊರತುಪಡಸಿ, ಈ ಸ್ಥಳದಲ್ಲಿ ಮಾತ್ರ ಮುಟ್ಟಿ ಗುಣಪಡಿಸುವವರು ತಲೆಯ ಮೇಲೆ ಹೊಡೆಯಲಿಲ್ಲ. [40]ಯೇಸು ಪೇತ್ರನ ಅತ್ತೆಯನ್ನು ಸ್ವಸ್ಥ ಮಾಡಿದ ನಂತರ ಉಂಟಾದಂತೆ, ಇಲ್ಲಿಯೂ ಉಂಟಾಯಿತು (ಮಾರ್ಕ 1; ಲೂಕ 4). ಮೆಲೇತೆಯ ಸ್ವಸ್ಥತೆಯ ಕಡೇಯ ಸ್ವಸ್ಥತೆಯಾಗಿದೆ. ವೆಸ್ಟ್ರ್ವಿಯರ ಪ್ರಕಾರ ಪೌಲನ ಸೇವಾವಧಿಯಲ್ಲಿ ಸ್ವಸ್ಥಮಾಡುವಂಥದ್ದು ನಿಂತುಹೋಯಿತು. ಎಫೆಸದಲ್ಲಿ ದೇವರು ಪೌಲನಿಗೆ "ವಿಶೇಷ ಅದ್ಭುತಗಳನ್ನು" ನೀಡಿದನು (ಅಪೊಸ್ತಲರ ಕೃತ್ಯಗಳು 19). ಅದು ಅನ್ಯರಿಗೆ ಸಾಕ್ಷಿಯಾಯಿತು; ಮೆಲೀತೆಯಲ್ಲಿ ಪೌಲನಿಗೆ ದೇವರು ಸ್ವಸ್ಥತೆಯ ಶಕ್ತಿ ನೀಡಿದನು, ಎರಡು ವರ್ಷಗಳ ನಂತರ ಅವನು ಬರೆದು, ಎಫಫ್ರೋದಿತನು ಸಾಯುವಷ್ಟು ಅಸೌಖ್ಯವಾಗಿರುವನು ಎಂದಿರುವನು (ಫಿಲಿಪ್ಪಿ 2:25-30).

[41]Fritz Rienecker, *A Linguistic Key to the Greek New Testament,* ed. Cleon L. Rogers, Jr. (Grand Rapids, Mich.: Zondervan Publishing House, Regency Reference Library, 1980), 343. [42]Barclay, 189. (ಒತ್ತಿ ಹೇಳಿದ್ದು ನನ್ನದು.) [43]ಪೌಲನ ನಾಯಕತ್ವವನ್ನು ಒಪ್ಪಿಕೊಂಡವರೊಂದಿಗೆ ಪೌಲನು ಸೇವೆ ಆರಂಭಿಸಿದನು. ಹಾಗೂ ದ್ವೀಪವಾಸಿಗಳಲ್ಲೂ

ಆರಂಭಿಸಿದನು, ಅವರು ಅನ್ಯರಾಗಿದ್ದರೂ, ನ್ಯಾಯ ನೀತಿಯ ಬಗ್ಗೆ ಅರಿವನ್ನು ಹೊಂದಿದ್ದರು, ಕೆಟ್ಟದ್ದಕ್ಕೆ ಶಿಕ್ಷೆ ಆಗಬೇಕೆಂದು ನಂಬಿದ್ದರು (ವಚನ 4) ತೀರ್ಪಿನಿಂದ ಬಿಡುಗಡೆ ನೀಡುವ ರಕ್ಷಕನ ಬಗ್ಗೆ ಸಾರಿದನು. [44]ಸ್ವಸ್ಥತೆಗೆ ನಿರ್ಭಂಧವಿರಲಿಲ್ಲ, ಅದು ಸಂದೇಶಕನಿಗೆ ಸೂಚನೆಯಾಗಿತ್ತು. [45]ಲೂಕನು ತಿಳಿಸದೆ ಇರುವದರಿಂದ ಮೆಲೀತೆಯಲ್ಲಿ ಪೌಲನಿಂದ ಯಾರು ಪರಿವರ್ತನೆಗೊಳ್ಳಲಿಲ್ಲ ಎಂಬುದಾಗಿದೆ, ರೋಮಾಯದಲ್ಲಿನ ಪರಿವರ್ತನೆಯ ಬಗ್ಗೆಯು ತಿಳಿದಿರುವದಿಲ್ಲ (ಫಿಲಿಪ್ಪಿ 1:12, 13; 4:22; ಫಿಲೋಮೋನ 10). ಅದು ಲೂಕನ ಉದ್ದೇಶವಾಗಿರಲಿಲ್ಲ. [46]ಅಪೊಸ್ತಲರ ಕೃತ್ಯಗಳು 27:1ರ ಟಿಪ್ಪಣಿ ನೋಡಿರಿ. [47]Adapted from Rick Atchley, "Stuck on a Deserved Island," Sermon preached at the Southern Hills church of Christ, Abilene, Texas, on 19 April 1987. [48]ಇದು ಕೃತಜ್ಞತೆಯ ಹಣ "ಗೌರವಧನ" (1 ತಿಮೊಥೆ 5:17). [49]ಅಗತ್ಯಕ್ಕನುಗುಣವಾಗಿ ಅಂಶವನ್ನು ಗಮನಿಸಿರಿ. [50]ಅನ್ಯರು ರಕ್ಷಣೆ ಹೊಂದಲು ಏನು ಮಾಡಬೇಕು, ಹಾಗೂ ಬಿದ್ದು ಹೋದ ದೇವರ ಮಗನು ಪುನಃ ಹೇಗೆ ಸ್ಥಾಪನೆಗೊಳ್ಳಬೇಕು.